ಸಿದ್ಧಗಂಗಾ



ನವೆಂಬರ್, 1976

ರಾಜ್ಯೋತ್ಸವ ಶುಭಾಶಯಗಳು

ಕನ್ನಡ ನಾಡಿನ ಭವ್ಯ ಭವಿಷ್ಯಕ್ಕೆ ಶ್ರಮಿಸಲು ಮುಖ್ಯಮಂತ್ರಿಗಳ ಕರೆ

ಕರ್ನಾಟಕ ರಾಜ್ಯೋದಯವಾಗಿ 20 ವರ್ಷಗಳು ಸಂದಿವೆ. ನಮ್ಮ ಪ್ರಗತಿ ಪಥದಲ್ಲಿ ಪ್ರತಿವರ್ಷವೂ ಒಂದು ಮೈಲುಗಲ್ಲು

- ಕರ್ನಾಟಕಕ್ಕೆ ವೈಭವೋಪೇತವಾದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆ ಇದೆ.

- ನಾಡ ಏಕೀಕರಣ ಈ ಭವ್ಯ ಪರಂಪರೆಯ ಪುನರುತ್ಥಾನ ಮತ್ತು ಭಾವೈಕ್ಯತೆಯ ಸಾಧನೆಗೆ ಪೋಷಕವಾಗಿದೆ.

- ಜೊತೆಗೆ ಆರ್ಥಿಕ ಪ್ರಗತಿ ಹಾಗೂ ಸಾಮಾಜಿಕ ಬೆಳವಣಿಗೆಗೆ ಪೂರಕವಾಗಿದೆ.

ರಾಜ್ಯದ ನಿರಂತರ ಪ್ರಗತಿಗಾಗಿ ನಾವೆಲ್ಲಾ
ಒಂದಾಗಿ ದುಡಿದರೆ ಕರ್ನಾಟಕದ ಭವಿಷ್ಯ ಭವ್ಯವಾಗಬಲ್ಲುದು.
ಈ ಸಂತಸದ ದಿನ ಜನತೆಗೆಲ್ಲ ಶುಭಕೋರಿ,
ಸುಖ ಸಮೃದ್ಧಿ ತರಲೆಂದು ಹಾರೈಸುತ್ತೇನೆ.



ಡಿ. ದೇವರಾಜ ಅರಸ್.

'ಸಿದ್ಧಗಂಗಾ'

ನವೆಂಬರ್ , ೧೯೭೬

ಸಂಪುಟ–೧೨ ಸಂಚಿಕೆ–೧೧

ಮುಖ ಪುಟ

ಉದಯವಾಗಿದೆ ನಮ್ಮ ಚಲುವ ಕನ್ನಡನಾಡು ।
ಭಾರತಾಂಬೆಯ ಮುಡಿಲ ಸಂಪದದ ಬೀಡು ॥

ಪ್ರಕಾಶಕರು
ಹೆಚ್. ಬಿ. ಗಂಗಾಧರಯ್ಯ
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

ಸಂಪಾದಕರು
ಪಂ॥ ಚನ್ನಪ್ಪ ಎರೇಸೀಮೆ
ಕೆ. ಜಿ. ರಂಗಯ್ಯ


ಜಾಹೀರಾತು ವ್ಯವಸ್ಥಾಪಕರು
ಎಂ. ರೇಣುಕಾರಾಧ್ಯ

ಹಂಚಿಕೆಯ ವ್ಯವಸ್ಥಾಪಕರು
ಎಸ್. ಗಂಗರುದ್ರಪ್ಪ

ಮುದ್ರಕರು
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ

ಪ್ರಕಟನೆಯ ಸ್ಥಳ
ಶ್ರೀ ಸಿದ್ಧಗಂಗಾ ಕ್ಷೇತ್ರ

ಚಂದಾ ವಿವರ
ವಾರ್ಷಿಕ ಚಂದಾ: 10 ರೂ
ಅಜೀವ ಸದಸ್ಯತ್ವ: 101 ರೂ



ಶ್ರೀವಾಣಿ

ಇಂದಿನ ಕಾಲದಲ್ಲಿ ಪ್ರಾಚೀನ ಕಾಲದ ನೀತಿ ಇಲ್ಲ, ನ್ಯಾಯ ಇಲ್ಲ, ಧರ್ಮವಿಲ್ಲ. ನೆಲಸ, ಅಧಿಕಾರ ಎಲ್ಲೆಲ್ಲೂ ಕುಡಿಯೊಡೆದೊಡಗಿದೆ. ಹಿಂದಿನಕಾಲದಲ್ಲಿ ಕಿರೀಟದ ಹೆಸರಿನಲ್ಲಿ ನಡೆಯುತ್ತಿದ್ದ ದಬ್ಬಾಳಿಕೆಗೆತುತ್ತಾಗಿ ಜನನೊಂದು ಬೆಂದರೆ, ಇಂದು ತತ್ವಗಳ, ಗುಂಪಿನ ಪಂಗಡಗಳ, ಜಾತಿ ಪಂಥದ ಆದರ್ಶದ ಉರುಳಿನಲ್ಲಿ ಸಾಮಾನ್ಯ ಮಾನವತೆಯು ಗೋಣು ಸಿಕ್ಕಿ ಪ್ರಾಣಗತವಾಗಿ ತೂಗಾಡುತ್ತಿದೆ ; ಉಸಿರು ಕಟ್ಟಿ ಒದ್ದಾಡುತ್ತಿದೆ. ಅಧಿಕಾರ ಹಣ, ಶಕ್ತಿ ಇವುಗಳನ್ನು ಭಗವಂತ ಕೊಟ್ಟಿರುವುದು ಜನತೆಗಾಗಿ, ಶಾಂತಿಗಾಗಿ, ಪ್ರಗತಿಗಾಗಿ ಎಂಬ ಅರಿವು ಇಂದು ಜನತೆಯಲ್ಲಿ ಇಲ್ಲವಾಗಿದೆ. ಜಾತಿ, ಭಾಷೆ, ಪ್ರಾಂತಗಳು ರೂಪುಗೊಂಡು ಸರ್ವಾಧಿಕಾರ ಸಾಮಾನ್ಯ ಜನತೆಯ ಸೇವೆಯ ಸೋಗಿನಲ್ಲಿ ಸರ್ವಶಕ್ತಿಯಾಗಿ, ವಿಶ್ವವ್ಯಾಪಕನಾಗಿ ತಾನೇ ತಾನಾಗಿ ಮೆರೆಯುತ್ತಿದೆ. ಅಲ್ಲದೆ ಇಂತಹ ಸರ್ವಾಧಿಕಾರದ ಸೋಗಿನ ಜೀವಸದ ತಲೆ ಮೆಟ್ಟಿ ವಿಜ್ಞಾನ ರಕ್ಕಸ ತನ್ನಲ್ಲಿನ ದೈವೀಗುಣಗಳನ್ನು ಅದುಮಿಟ್ಟು, ಮೈಕೊಡವಿ ಎದ್ದು ನಿಂತು, ಸತ್ಯವನ್ನು ತುಳಿದು, ಪಾಶವೀ ಶಕ್ತಿಯ ಕರಾಳ ಛತ್ರಿಯ ಕೆಳಗೆ ಮಾನವ ಜೀವನವನ್ನು ಒಂದುಗೂಡಿಸಿ, ಭೀತಿಯ ಬಲೆಯನ್ನು ಸುತ್ತನೇದು, ಏಕೈಕ ಈಶ್ವರ್ಯ ಸಾಮ್ರಾಟನಾಗಿ ಮೆರೆಯುತ್ತಿದ್ದಾನೆ. ಇಂತಹ ಸ್ವಾರ್ಥ ರಕ್ಕಸ ಶಕ್ತಿ ಒಂದಲ್ಲ ಒಂದು ಹೆಸರಿನಲ್ಲಿ ಒಂದಲ್ಲ ಒಂದು ರೂಪದಲ್ಲಿ, ಒಂದಲ್ಲ ಒಂದು ಕಾಲದಲ್ಲಿ ಯುಗ ಯುಗಗಳಿಂದಲೂ ಭೂತಾಕಾರವಾಗಿ ನಿಂತು ಸಾಮರಸ್ಯವನ್ನು ಕದಡಿ ಶಾಂತಿಯನ್ನು ಭಂಗಪಡಿಸುತ್ತಿರುವುದು ಇತಿಹಾಸದ ಅನುಭವದ ಮಾತಾಗಿದೆ.

—

ಪರಿವಿಡಿ

ಲೇಖಕರಲ್ಲಿ ಮನವಿ

‘ಸಿದ್ಧಗಂಗಾ’ ಮಾಸ ಪತ್ರಿಕೆಯು ಲೇಖಕರಿಂದ ವಿಚಾರ ಪ್ರಚೋದಕವಾದ ಲೇಖನಗಳನ್ನು ಸದಾ ಸ್ವಾಗತಿಸುತ್ತದೆ. ಲೇಖನಗಳು ಧರ್ಮ, ಸಂಸ್ಕೃತಿ, ಸಾಮಾಜಿಕ, ಐತಿಹಾಸಿಕ ಹಾಗೂ ಸ್ಥಳ ಮಹಾತ್ಮೆಗಳಿಗೆ ಸಂಬಂಧಿಸಿದವುಗಳಾದರೆ ಹೆಚ್ಚು ಆದ್ಯತೆ ನೀಡಲಾಗುವುದು. ಪ್ರಚಲಿತ ಸಾಮಾಜಿಕ ಜೀವನದ ಸಮಸ್ಯೆಗಳನ್ನು ಬಿಂಬಿಸುವ ಹಾಗೂ ಅವು ಗಳಿಗೆ ಪರಿಹಾರ ಸೂಚಿಸುವ ಸಣ್ಣಕಥೆ, ಕವನ ಮತ್ತು ಪ್ರಬಂಧಗಳಿಗೂ ಸ್ವಾಗತವುಂಟು. ಲೇಖನಗಳು ಫುಲ್‌ಸ್ಕೇಪ್ ಸೈಜಿನ 3 ಪುಟಗಳಿಗೆ ಮೀರದಂತಿರಬೇಕು. ಸ್ವೀಕೃತವಾದ ಲೇಖನಗಳಿಗೆ "ಸಿದ್ಧಗಂಗಾ" ಆಗಿಂದಾಗ್ಗೆ ನಿಗದಿ ಮಾಡಿಕೊಳ್ಳುವ ಸಂಭಾವನೆಯನ್ನು ನೀಡಲಾಗುವುದು. ಅಸ್ವೀಕೃತ ಲೇಖನಗಳನ್ನು ಹಿಂತಿರುಗಿಸಲಾಗುವುದಿಲ್ಲ. ಪ್ರಯುಕ್ತ ಹಸ್ತ ಪ್ರತಿಯ ನಕಲನ್ನು ಕಾದಿರಿಸಿಕೊಳ್ಳುವುದು ಸೂಕ್ತ. ಲೇಖನಗಳನ್ನು ಸ್ಫುಟವಾಗಿ ಕಾಗದದ ಒಂದೇ ಮಗ್ಗುಲಲ್ಲಿ ಬರೆದು

"ಸಂಪಾದಕರು"
‘ಸಿದ್ಧಗಂಗಾ’ [ಕನ್ನಡ ಮಾಸಪತ್ರಿಕೆ]
ಶ್ರೀ ಸಿದ್ಧಗಂಗಾ ಕ್ಷೇತ್ರ -572131
ತುಮಕೂರು ಜಿಲ್ಲೆ

ಇವರಿಗೆ ಕಳುಹಿಸಿ ಕೊಡಬೇಕಾಗಿ ವಿನಂತಿ.

ಲಿಪ್ತ ರಾಷ್ಟ್ರಗಳ

ಕೊಲಂಬೋ ಸಮ್ಮೇಳನ

1976 ರ ಆಗಸ್ಟ್ 16 ರಿಂದ 19 ರವರೆಗೆ ಕೊಲಂಬೋದಲ್ಲಿ ನಡೆದ ಅಲಿಪ್ತ ರಾಷ್ಟ್ರಗಳ ಸಮ್ಮೇಳನದಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಮಾಡಿದ ಭಾಷಣದ ಅನುವಾದ

ಮೂಲ: ಇಂಗ್ಲಿಷ್ ಕನ್ನಡಕ್ಕೆ: ಶ್ರೀ ವಿರೂಪಾಕ್ಷಯ್ಯ

ಧ್ಯಕ್ಷಣಿಯವರೇ, ರಾಷ್ಟ್ರನಾಯಕರೇ,
ುತ್ತು ಒಡನಾಡಿಗಳೇ,

ದೈವೇಚ್ಛೆಯಂತೆ ನಾವೆಲ್ಲ ಇಂದು ಇಲ್ಲಿ ೇಂದ್ದೇವೆ ಪ್ರತಿಷ್ಠಿತರಿಂದ ಕೂಡಿದ ಈ ಸಭೆಯ ೇದಿಕೆಯಲ್ಲಿ ನಿಂತು ಮಾತನಾಡಲು ಹರ್ಷಿಸುತ್ತೇನೆ. ನೇ ಮಹಾ ಯುದ್ಧದ ನಂತರ ಸ್ವಾತಂತ್ರ್ಯ ಪಡೆ ಂದಿನಿಂದ ಈವರೆಗೆ ಪ್ರಗತಿಯತ್ತ ನಮ್ಮ ಪ್ರಯಾಣ ುಖಕರವಾಗಿಲ್ಲ; ಆದರೂ ನಾವು ಸ್ಥಿರ ಹಾಗೂ ್ಯೇಯಪೂರ್ಣ ಗುರಿಯುಳ್ಳವರಾಗಿದ್ದೇವೆ. ಭವ್ಯ ಭವಿಷ್ಯದ ನಿರ್ಮಾಣದ ಬಗ್ಗೆ ಚರ್ಚಿಸಲು 1947ರಲ್ಲಿ ಹಲಿಯಲ್ಲಿ ನಡೆದ ಏಷ್ಯ ರಾಷ್ಟ್ರಗಳ ಸಮ್ಮೇಳನದಲ್ಲಿ ಂ. ಜವಹರಲಾಲ್ ನೆಹರೂರವರು "ಭವಿಷ್ಯದಲ್ಲಿ ಷ್ಯಾ ರಾಷ್ಟ್ರಗಳು ಪರತಂತ್ರವಾಗಿರುವುದಾಗಲೀ ಅನ್ಯರ ್ಟಗೊಂಬೆಯಾಗಿರುವುದಾಗಲೀ ಅಸಾಧ್ಯ"ವೆಂದೂ ಸ್ವಂತ ಬಲದಿಂದ ನಮ್ಮ ಭವಿಷ್ಯವನ್ನು ರೂಪಿಸಿ ೊಳ್ಳಲು ಮತ್ತು ಎಲ್ಲರೊಡನೆ ಸಹಕರಿಸಿ ಬಾಳಲು ನಿರ್ಧರಿಸಿದ್ದೇವೆ. ಏಷ್ಯಾವು ಯುರೋಪ್ ಮತ್ತು ಅಮೇರಿಕಾಗಳೊಂದಿಗೇ ಅಲ್ಲದೆ ಇನ್ನೂ ಪ್ರಗತಿ ಪಥದಲ್ಲೇ ಇರುವ ಆಫ್ರಿಕಾದಂತಹ ದೇಶಗಳೊಡನೆ ತನ್ನ ಸ್ನೇಹ ಹಸ್ತವನ್ನು ನೀಡಲು ಸಿದ್ಧವಿದೆ. ವಿಶ್ವ ಮಾನವ ಸ್ವಾತಂತ್ರ್ಯ ಕೇವಲ ಒಂದು ವರ್ಗದ ಉನ್ನತಿಯ ಮೇಲೆ ನಿಂತಿಲ್ಲ; ಬದಲಾಗಿ ವಿಶ್ವದ ಪ್ರತಿಯೊಬ್ಬ ಪ್ರಜೆಯ ಪ್ರಗತಿಗೆ ಅನುಕೂಲಕರವಾಗುವ ಅವಕಾಶದಿಂದ ಮಾತ್ರ ಅದು ಅರ್ಥಪೂರ್ಣವಾಗುತ್ತದೆ" ಎಂದು ಸಾರಿದ್ದಾರೆ.

ಬಾಂಡುಂಗ್ ಸಮ್ಮೇಳನದಲ್ಲಿ ಬೀಜರೂಪದಲ್ಲಿದ್ದ ಈ ಅಲಿಪ್ತ ನೀತಿಯು ಬೆಲ್ಗ್ರೇಡ್ ಸಮ್ಮೇಳನದಲ್ಲಿ ಅಂಕುರಿಸಿ, ಕೈರೋ, ಲುಸಾಕಾ ಹಾಗೂ ಆಲ್ಜೀರಿಯಾ ಸಮ್ಮೇಳನಗಳಲ್ಲಿ ಶಕ್ತಿಗಳಿಸಿ ಬೆಳೆದು ನಿಂತಿದೆ. ಈ ಸಮ್ಮೇಳನವು ಪ್ರಗತಿಯ ಪಥದ ಮುಂದಿನ ಹೆಜ್ಜೆಯೇ ಅಲ್ಲದೇ ವಿಶ್ವವನ್ನೇ ತನ್ನ

ಷ್ಟ್ರೀಯದ ಪರಿಧಿಯೊಳಗೆ ತರುವ ಒಂದು ಸಂಕೇತ ವಾಗಿದೆ. ಇದು ಪಾರತಂತ್ರ್ಯವನ್ನು ನಿರಾಕರಿಸಿ ನ್ಯಾಯ ಮತ್ತು ಸಮಾನತೆಯ ಪವಿತ್ರ ಮೌಲ್ಯಗಳ ಮೇಲೆ ವಿಶ್ವಶಾಂತಿ ಹಾಗೂ ನವೀನ ಆರ್ಥಿಕ ಕ್ರಮ ಗಳನ್ನು ರೂಪಿಸಲು ಸಹಾಯಕವಾಗಿದೆ. ಅನೇಕ ರಾಷ್ಟ್ರಗಳ ಪ್ರತಿನಿಧಿತ್ವವಿರುವ ಇಲ್ಲಿ ಎಲ್ಲ ರಾಷ್ಟ್ರಗಳ ಮೂಲಭೂತ ಧ್ಯೇಯವು ತಮ್ಮ ಮತ್ತು ಇತರರ ಸ್ವಾತಂತ್ರ್ಯ, ಸಮಾನತೆ ಹಾಗೂ ಸ್ಥಿರತೆಯನ್ನು ರಕ್ಷಿಸುವುದೇ ಆಗಿದೆ.

ಪ್ರಸ್ತುತ ಸಮ್ಮೇಳನವು ನಮ್ಮ ಖಂಡದಲ್ಲಿ ಅದರಲ್ಲೂ ಶ್ರೀ ಲಂಕಾದಲ್ಲಿ ನಡೆಯುತ್ತಿರುವುದು ಸಮಯೋಜಿತವಾಗಿದೆ. ಅಧ್ಯಕ್ಷಿಣಿಯವರೇ ತಮಗೂ ತಮ್ಮ ಪ್ರಜಾಕೋಟಿಗೂ ನಮ್ಮ ರಾಷ್ಟ್ರದಜನತೆಯ ಪರವಾಗಿ ಹಾರ್ಧಿಕ ಶುಭಾಶಯಗಳು. ಅಂತರ ರಾಷ್ಟ್ರೀಯ ಸಂಬಂಧಗಳಲ್ಲಿ, ಅಲಿಪ್ತ ನೀತಿಯ ಚಳು ವಳಿಯಲ್ಲಿ ದಿ॥ S W R D ಬಂಡಾರನಾಯಕೆ ಹಾಗೂ ತಾವು ಮಹತ್ತರ ಪಾತ್ರ ನಿರ್ವಹಿಸಿದ್ದೀರಿ. ಪ್ರಸ್ತುತ ತಮ್ಮ ಪಾತ್ರ ಮಹತ್ತರವಾದುದಾಗಿದೆ. ಭಾರತ–ಸಿಂಹಳಗಳ ನಡುವಣ ಸ್ನೇಹ ಸಂಬಂಧ ಬಹಳ ಹಿಂದಿನದು. ಧರ್ಮ, ಸಂಸ್ಕೃತಿ, ಕಲೆ, ಸಾಹಿತ್ಯಕ್ಷೇತ್ರಗಳ ನಿಕಟಸಂಬಂಧ ಸ್ವಾತಂತ್ರ್ಯ ನಂತರ ಸಹಕಾರ-ಸಹಾಯಗಳಿಂದ ಬೆಳೆದಿದೆ.

ನಮ್ಮ ಗುರಿಸಾಧನೆಗಾಗಿ ಶ್ರಮಿಸಿರುವ ಅಲ್ಜೀರಿಯಾದ ಅಧ್ಯಕ್ಷರಾದ ಬೊಮಿಡಿಯನ್‌ರವರಿಗೆ ನನ್ನ ಧನ್ಯವಾದಗಳು. ನಮ್ಮ ಮಧ್ಯೆ ಇರುವ ಅಲಿಪ್ತ ನೀತಿಯ ಸಂಸ್ಥಾಪಕರಾದ ಅಧ್ಯಕ್ಷ ಟಿಟೋ ರವರ ಅಮೂಲ್ಯ ಸಲಹೆಗಳು ನಮಗೆ ಇಂದು ಬೇಕಾ ಗಿವೆ. ಅಲ್ಲದೆ ಬಹು ಮಂದಿ ರಾಷ್ಟ್ರವಿಮೋಚನಾ ಚಳುವಳಿಯ ಹಾಗೂ ರಾಷ್ಟ್ರನಿರ್ಮಾಣಕಾರ್ಯದಲ್ಲಿ ನಿರತರಾದ ಮುಖಂಡರು ಇಲ್ಲಿರುವುದು ಹರ್ಷದಾಯ ಕಸಂಗತಿಯಾಗಿದೆ ಅಂಗೋಲ, ಕೇಪ್‌ವೆರ್ಡ್ ಕೊಮೋರಾಸ್, ಕೊರಿಯಾ ರಿಪಬ್ಲಿಕ್, ಪನಾಮಾ ಮೊಜಾಂಬಿಕ್, ಸಾ ಓ ಟೋ ಮ್, ಪ್ರಿನ್ಸಿಪ್, ಸೈಶೆಲ್ಲಿಸ್, P-L.O ಹಾಗೂ ಇನ್ನುಳಿದ ಎಲ್ಲ

ರಾಷ್ಟ್ರದ ಪ್ರತಿನಿಧಿಗಳನ್ನು ಸ್ವಾಗತಿಸುತ್ತೇ
ವಿಯಟ್ನಾಂ ಗಣರಾಜ್ಯದ ಪ್ರತಿನಿಧಿಗಳು, ಏಷಾ
ಇತರೆ ರಾಷ್ಟ್ರದ ಜನತೆ ಇಲ್ಲಿ ಸೇರಿರುವುದು ತೃ
ತರುವ ವಿಚಾರವೇ ಸರಿ. ಏಷ್ಯಾಜನತೆಯ ಇತಿಹಾ
ವಿಜಯ, ಐಕ್ಯತೆ ಸಾಧಿಸಿದ ವಿಯಟ್ನಾಂ ಸಂ
ಹರ್ಷವನ್ನುಂಟುಮಾಡಿದೆ.

ಶೀತಲ ಸಮರ ತಂದ ವರ್ಗಭೇದದ
ಣಾಮ ಇನ್ನೂ ಹಲವು ರಾಷ್ಟ್ರಗಳ ರಾಜಕೀಯ
ಹಗಳಲ್ಲಿ ತನ್ನ ಪ್ರಭಾವವನ್ನು ಬೀರುತ್ತಿದೆ. ರಾ
ಪ್ರೇಮವನ್ನು ಕುಂಠಿತ ಗೊಳಿಸುವಿಕೆ, ಸ್ವತ
ಆಲೋಚನಾ ಪ್ರವೃತ್ತಿಯ ವ್ಯಕ್ತಿ ಮತ್ತು ಸಕಾ
ಗಳ ಶಕ್ತಿಯನ್ನು ಕುಗ್ಗಿಸುವ ಪ್ರಯತ್ನಗಳು ನಡೆ
ಇವೆ. ಆರ್ಥಿಕ ಸಮಸ್ಯೆ ಇನ್ನೂ ಸಮಸ್ಯೆಯಾಗಿ
ಇದೆ. ತಾಂತ್ರಿಕತೆಯ ಭೇದ ವಸಾಹತುಶಾಹಿಗಳ
ಪೋಷಿಸಲ್ಪಡುತ್ತಿದೆ. ಶಸ್ತ್ರ ಪಡೆಗಳನ್ನು ಕಡಿ
ಮಾಡುವ ಬದಲು ದ್ವಿಗುಣಗೊಳಿಸಲಾಗುತ್ತಿ
ಹಿಂದೂಸಾಗರ ಶಾಂತಿಸಾಗರವಾಗಲೆಂದರೆ ಪ್ರತಿ
ಧಿಗಳು ಒಳಸಂಚಿನಿಂದ ಗೊಂದಲವೆಬ್ಬಿಸುತ್ತಿದ್ದಾ
ನಮ್ಮ ಅಲಿಪ್ತ ನೀತಿಯ ಮುಖ್ಯಗುರಿ ಎಲ್ಲ ರಾ
ಗಳೂ ಸ್ವಶಕ್ತಿಯಿಂದ ತಮ್ಮ ಸಮಸ್ಯೆಗಳನ್ನು ಎ
ಸಲು ಸಹಕರಿಸುವುದಾಗಿದೆ. ರಾಷ್ಟ್ರ ರಾಷ್ಟ್ರಗಳ ನ
ವಣ ಗುಂಪುಗಾರಿಕೆಯನ್ನು ತೊಡೆದು ಸ್ನೇಹ ಸಾ
ರ್ದಗಳ ಮೂಲಕ ವಿಶ್ವಶಾಂತಿ ಸ್ಥಾಪಿಸುವ
ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ.

ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವ
ಉಳಿಸಿಕೊಳ್ಳಲು ಅಲಿಪ್ತ ನೀತಿಯೇ ಮುಖ್ಯ ಮಾ
ವೆಂದು ಶೀತಲ ಯುದ್ಧವು ಸಿದ್ಧಮಾಡಿತೋರಿಸಿದೆ.
ತಂತ್ರ್ಯ–ಪರತಂತ್ರ; ಸಹಕಾರದಿಂದ ಉಳಿಯುವು
ದ್ವೇಷಾಸೂಯೆಯಿಂದ ಅಳಿಯುವುದು; ಯಾವ
ಸರಿ? ಸೂಕ್ತವಾದುದನ್ನು ಆರಿಸುವುದು ನಮ್ಮ
ಹೊಸದಾಗಿ ಸ್ವಾತಂತ್ರ್ಯ ಗಳಿಸಿದ ರಾಷ್ಟ್ರಗ
ಸದಸ್ಯತ್ವ ಹೊಂದುತ್ತಿರುವುದು ಅಲಿಪ್ತ ನೀ
ಸತ್ಯತೆಯ ಸಮರ್ಥನೆಯಾಗಿದೆ.

ನಮ್ಮ ಧ್ಯೇಯ ಸಾಧನೆಗೆ ಹೇಗೆ ಮುಂದುವರಿಯಬೇಕೆಂಬುದನ್ನು ನಾವು ನಿರ್ಧರಿಸಬೇಕಾಗಿದೆ ಅಲಿಪ್ತ ನೀತಿಯು ವಿಶ್ವದಲ್ಲಿ ಪ್ರಭಾವ ಬೀರಿದ್ದರೆ ಅದು ಅದರ ಅಂತಃಶಕ್ತಿಯ ದ್ಯೋತಕವಾಗಿದೆ. ಸಬಲ ಅಥವಾ ದುರ್ಬಲ ರಾಷ್ಟ್ರದ ಉಳಿವು–ಅಳಿವಿನ ನಿರ್ಧಾರ ಆ ರಾಷ್ಟ್ರದ ಕೈಯ್ಯಲ್ಲಿದೆ. ನೂತನ ರಾಜಕೀಯ–ಆರ್ಥಿಕ ನೀತಿಯಮೇಲೆ ನಿಂತಿರುವ ಅಲಿಪ್ತ ನೀಯು ಪ್ರಬಲ ಸಾಧನ. ಗುರಿ ಸಾಧನೆಗೆ ಒಗ್ಗಟ್ಟು ಹೆಚ್ಚಬೇಕು. ಈ ನೀತಿಯು ವಿಶ್ವಶಾಂತಿ ಸ್ಥಾಪನೆಗೆ ಹಾಗೂ ಸರ್ವರ ಏಳಿಗೆಗೆ ಅನುಕೂಲವಾಗುವ ಆರ್ಥಿಕ ಕ್ರಮ ನಿರೂಪಣೆಗೆ ಸಮರ್ಥವಾಗಿದೆ. ಸಹಕಾರದಿಂದ ಮಾತ್ರವೇ ಪ್ರಪಂಚ ಯಶಸ್ಸನ್ನು ಸಾಧಿಸಬಲ್ಲುದು. ನಾವೆಲ್ಲ ಒಂದುಗೂಡಿ ಧೈರ್ಯ ಹಾಗೂ ನಿಶ್ಚಿತ ನಿರ್ಧಾರಗಳಿಂದ ವಿಶ್ವಮೈತ್ರಿಯನ್ನು ಸ್ಥಾಪಿಸೋಣ.

ಅಲಿಪ್ತ ನೀತಿಯು ಸಾಧಿಸಿದ ವಿಜಯ, ಸಾಧನೆ ಹಾಗೂ ಪ್ರಗತಿಯನ್ನು ಬಾಹ್ಯಶಕ್ತಿಗಳು ನಮ್ಮ ರಚನಾತ್ಮಕ ಚಟುವಟಿಕೆಗಳನ್ನು ಚಿವುಟಿ ಹಾಕುವ ಹಾಗೂ ವಿನಾ ಕಾರಣ ಒತ್ತಡವನ್ನು ಹೇರುವ ಪ್ರವೃತ್ತಿಯನ್ನು ಹೇರುತ್ತಿವೆ. ಸಂಯುಕ್ತ ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಅಲಿಪ್ತ ರಾಷ್ಟ್ರಗಳ ರಾಜಕೀಯದಲ್ಲಿ ಅಸ್ಥಿರತೆ ಒಡ್ಡುವ ಮತ್ತು ದೋಷಾರೋಪಣೆ ಮಾಡುವ ಪ್ರವೃತ್ತಿ ಕಂಡುಬರುತ್ತಿದೆ. ಇದನ್ನು ನಾವು ನಿರೋಧಿಸಬೇಕಾಗಿದೆ. ಬಾಹ್ಯ ಒತ್ತಡಗಳಿಗೆ ಮಣಿಯದೆ ನಮ್ಮ ನಮ್ಮ ಸಮಸ್ಯೆಗಳಿಗೆ ಸ್ವಯಂ ಪರಿಹಾರ ಕಂಡುಕೊಳ್ಳಬೇಕಾಗಿದೆ. ಅಲಿಪ್ತ ನೀತಿಯು ಅಧಿಕ ಸಂಖ್ಯೆಯಲ್ಲಿ ರಾಷ್ಟ್ರ ಹಾಗೂ ಮುಖಂಡರ ಮನವೊಲಿಸುವ ಕಾರಣದಿಂದಲೇ ಮೂಲಭೂತ ತತ್ವಗಳಿಂದ ಮಾತ್ರ ವಿಚಲಿತರಾಗಬಾರದು. ನಮ್ಮ ಚಳುವಳಿಯ ಸಫ ಸಫಲತೆ, ಸಾಧನೆ ಮತ್ತು ಶಕ್ತಿಗಳ ಮೂಲ ಕಾಲೋಚಿತ ಕ್ರಿಯಾಪ್ರವೃತ್ತಿಯಲ್ಲಿದೆ. ದಬ್ಬಾಳಿಕೆ ಹಾಗೂ ವಿಚಾರಹೀನ ಕ್ರಮಗಳನ್ನು ತಿರಸ್ಕರಿಸುವ ನಮಗೆ ನಮ್ಮ ಗುರಿಸಾಧನೆಯ ಬಗ್ಗೆ ಆಳವಾಗಿ ವಿಚಾರ ಮಾಡಬೇಕಾಗಿದೆ.

ಕೇವಲ ಸಮರದ ಕಾರಣವನ್ನು ನಾವೆಷ್ಟು ಕಳಕಳಿಯಿಂದ ಪ್ರಶ್ನಿಸಿದೆವೋ ಮೈತ್ರಿ ಸಂಧಾನದ ಪ್ರಯತ್ನಗಳನ್ನು ಅಷ್ಟೇ ಸಂತೋಷದಿಂದ ಸ್ವಾಗತಿಸಬೇಕು. ಈ ದಿಸೆಯಲ್ಲಿ ಹೆಲ್ಸಿಂಕಿ ಒಪ್ಪಂದ ಒಂದು ಸ್ವಾಗತಾರ್ಹ ಘಟನೆ. ಪ್ರಸ್ತುತ ಈ ವಿಷಯದ ಸರದಿ ತುಂಬಾ ಸೀಮಿತವಾಗಿದೆ. ಇದರ ವ್ಯಾಪ್ತಿಯನ್ನು ವಿಶ್ವಾದ್ಯಂತ ವಿಸ್ತರಿಸಬೇಕು. ಸ್ಪರ್ಧಾಯುಕ್ತ ನೆರೆಹೊರೆಯ ರಾಷ್ಟ್ರಗಳಲ್ಲಿ ಮೈತ್ರಿ ಸಂಧಾನ ಕಾರ್ಯದಲ್ಲಿ ಯಶ ಸಾಧಿಸಲು ಯೂರೋಪು ಅಲಿಪ್ತ ರಾಷ್ಟ್ರಗಳನ್ನು ಆದರದಿಂದ ಕಾಣುವುದು ಅವಶ್ಯ. ಸಹಜೀವನ ಮತ್ತು ಸಹಕಾರ ಸ್ಥಾಪನೆಯಿಂದ ಮಾತ್ರ ಶಾಂತಿ ಸಂಧಾನದ ಯತ್ನ ಸಫಲವಾಗಲು ಸಾಧ್ಯ.

ಎರಡನೇ ಮಹಾಯುದ್ಧಾನಂತರದ ಶಾಂತಿ ಸಂಧಾನದ ವಿಫಲತೆಗೆ ಆದು ಏಷ್ಯಾ ರಾಷ್ಟ್ರಗಳೂ ಸೇರಿದಂತೆ ಇತರ ಅನೇಕ ರಾಷ್ಟ್ರಗಳ ಪ್ರಾತಿನಿಧ್ಯತೆಯನ್ನು ಮರೆತುದೇ ಕಾರಣ. ಶಾಂತಿ ಸ್ಥಾಪನೆಯ ಯತ್ನದಲ್ಲಿ ಆರ್ಥಿಕ ದುರ್ಬಲತೆಯ ಕಾರಣದಿಂದ ಕೆಲವು ರಾಷ್ಟ್ರಗಳ ಧೋರಣೆಯನ್ನು ಅಲ್ಲಗಳೆಯುವಂತಿಲ್ಲ; ಹಾಗೂ ಆರ್ಥಿಕ ಸ್ಥಿರತೆ ಹೊಂದಿದ ಸಶಕ್ತ ರಾಷ್ಟ್ರಗಳ ಸಲಹೆಗಳೇ ಅಂತಿಮವೂ ಅಲ್ಲ. ಮಾನವ ಶಕ್ತಿ ಮಿಲಿಟರಿ ಶಕ್ತಿಯನ್ನು ಮೀರಿದ್ದು. ಏಷ್ಯಾ ರಾಷ್ಟ್ರವೊಂದರಲ್ಲಿ ನಡೆದ ಹೋರಾಟವೇ ಇದಕ್ಕೆ ನಿದರ್ಶನ. ವಿಶ್ವದ ಎಲ್ಲ ರಾಷ್ಟ್ರಗಳ ಬೆಂಬಲದಿಂದ ಮಾತ್ರ ಶಾಂತಿ ಸ್ಥಾಪನೆ ಸಾಧ್ಯವೆಂಬುದೇ ಅಲಿಪ್ತರಾಷ್ಟ್ರಗಳ ನೀತಿ. ಪರಸ್ಪರ ಉದ್ಭವಿಸುವ ಗುಂಪುಗಾರಿಕೆಯ ಪರಿಣಾಮ ಬಾಹ್ಯ ಶಕ್ತಿಗಳಿಂದುಂಟಾಗುವ ಅಪಾಯಕ್ಕಿಂತ ಕಡಿಮೆಯೇನಲ್ಲ. ನಮ್ಮ ಸಂಘ ಶಕ್ತಿಯನ್ನು ಕುಂದಿಸುವವರ ಬಗ್ಗೆ ಎಚ್ಚರದಿಂದಿರಬೇಕು. ಸಮಸ್ಯೆಗಳ ಬಗ್ಗೆ ಸದಸ್ಯರಲ್ಲುಂಟಾಗುವ ಅಭಿಪ್ರಾಯ ಭೇದವೂ ಸಂಘಶಕ್ತಿಯನ್ನು ಕುಗ್ಗಿಸುವ ಮಟ್ಟಕ್ಕೇರಬಹುದು. ಗುರಿಸಾಧನೆಯ ಆತುರದಲ್ಲಿ ಸಾಮೂಹಿಕ ಹಿತವನ್ನು ಮರೆತರೆ ತೊಡಕು ತಾನಾಗಿಯೇ ಉದ್ಭವಿಸುತ್ತದೆ. ಭಾರತ ಯಾವಾಗಲೂ ಚರ್ಚಾಸ್ಪದ ಸಮಸ್ಯೆಗಳನ್ನು ಅಲಿಪ್ತ ರಾಷ್ಟ್ರಗಳ ಅಥವಾ ಅಂತರ ರಾಷ್ಟ್ರೀಯ ಸಂಸ್ಥೆಗಳ ಮುಂದೆ ಒಡ್ಡುವುದರಿಂದ ದೂರವಿದೆ.

ಸಂಘಶಕ್ತಿಯನ್ನು ಸಡಿಲಗೊಳಿಸುವ ಯಾವುದೇ ಸಮಸ್ಯೆ ಅಥವಾ ವಾದ ತಲೆದೋರದಂತೆ ಎಚ್ಚರ ವಹಿಸಬೇಕು. ಅಲ್ಲದೆ ಆಂತರಿಕ ಸಮಸ್ಯೆಗಳ ಪರಿಹಾರಕ್ಕಾಗಿ ಬಾಹ್ಯ ಶಕ್ತಿಗಳು ತಲೆ ಹಾಕದಂತೆ ತಡೆದು ಸಮನ್ವಯದಿಂದ ಸ್ವಯಂ ಪರಿಹರಿಸಿಕೊಳ್ಳಬೇಕು.

1950ರಿಂದ 60ರ ಅವಧಿಯ ಮುಖ್ಯಗುರಿ ಹಲವು ರಾಷ್ಟ್ರಗಳಿಗೆ ಸ್ವಾತಂತ್ರ್ಯ ಸಂಪಾದನೆಯೇ ಆಗಿತ್ತು; ಆದರೆ ಇಂದು ಸ್ವಾವಲಂಬನೆಯೇ ಪ್ರಮುಖ ಗುರಿಯಾಗಿದೆ. ನಾವಿಂದು ಸಮಕಾಲೀನ ವಿಶ್ವದ ನ್ಯಾಯಬದ್ಧ ಸ್ಥಾನದ ಗಳಿಕೆ ಹಾಗೂ ಹೊಸ ಜ್ಞಾನದ ಬೆಳಕಿನಲ್ಲಿ ನೂತನ ಆರ್ಥಿಕ ಕ್ರಮದ ಸುಧಾರಣೆಯ ಪ್ರಯತ್ನದಲ್ಲಿದ್ದೇವೆ. ಸಂಪ್ರದಾಯಬದ್ಧ ಜೀವನಕ್ಕೆ ಅಂಟಿಕೊಂಡಿರುವ ವ್ಯಕ್ತಿಗಳಿಂದ ನಮಗೆ ಈ ದಿಸೆಯಲ್ಲಿ ಅಡ್ಡಿಯಾಗುತ್ತಿದೆ. ಅಶಕ್ತ ರಾಷ್ಟ್ರಗಳ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯಕ್ಕೆ ಭಂಗ ತರದಂತಹ ಸಹಬಂಧುತ್ವ ಸೂತ್ರವನ್ನು ವಿಶ್ವ ರೂಪಿಸಿಕೊಳ್ಳಬೇಕಾಗಿದೆ, ಯಾರೊಬ್ಬರ ಸ್ವಾತಂತ್ರ್ಯಕ್ಕೂ ಧಕ್ಕೆ ಬರದಂತೆ ಮೇಲ್ಮೆಗೇರಬೇಕಾಗಿದೆ.

ಇಂದು ಆರ್ಥಿಕ ವಿಚಾರದಲ್ಲಿ ಪ್ರಗತಿಪರ ಬದಲಾವಣೆಗಳಾಗಿವೆ. ಕೇವಲ ಸಂಪನ್ಮೂಲಗಳಿಂದ ಒಂದು ರಾಷ್ಟ್ರ ತಾಂತ್ರಿಕವಾಗಿ ಮುಂದುವರೆದ ರಾಷ್ಟ್ರಕ್ಕೆ ಸರಿಸಾಟಿಯಾಗಿ ನಿಲ್ಲಲಾರದು. ಪ್ರಬಲ ರಾಷ್ಟ್ರ ನಿರ್ಮಾಣಕ್ಕೆ ತಂತ್ರಜ್ಞಾನದ ಬೆಳವಣಿಗೆ, ಸಂಪನ್ಮೂಲಗಳ ಕೌಶಲ್ಯಪೂರ್ಣ ಬಳಕೆ ಅಗತ್ಯವಾದವು. ಪ್ರಸ್ತುತ ಬಾಹ್ಯಶಕ್ತಿಗಳ ನಿರೋಧಕ್ಕೆ ಬೇಕಾಗುವ ಶಕ್ತಿಗಳಿಕೆಯ ಮಟ್ಟಕ್ಕಾದರೂ ರಾಜಕೀಯ ಹಾಗೂ ಆರ್ಥಿಕ ಸಮಾನತೆ ಮತ್ತು ಭದ್ರತೆಗಳನ್ನು ಹೊಂದಬೇಕಾಗಿದೆ. ಪ್ರಕೃತಿ ಸಂಪನ್ಮೂಲಗಳ ಯುಕ್ತ ಬಳಕೆಗೆ ಬೇಕಾಗುವ ತಂತ್ರಜ್ಞಾನದ ಬೆಳವಣಿಗೆಗೆ ಪರಸ್ಪರ ಸಹಕಾರ ಅತ್ಯಗತ್ಯ ಪ್ರಗತಿಪರ ಹಾಗೂ ಹಿಂದುಳಿದ ರಾಷ್ಟ್ರಗಳ ನಡುವಿನ ಆರ್ಥಿಕ ವೈಷಮ್ಯಕ್ಕೆ ಎಡೆಕೊಡದೆ ಅವುಗಳ ನಡುವೆ ಸ್ನೇಹ-ಸಹಕಾರಗಳು ಮೂಡುವಂತೆ ಮಾಡಬೇಕಾಗಿದೆ. ಇಡೀ ವಿಶ್ವದ ಉತ್ಪಾದನೆಯಲ್ಲಿ ಎಲ್ಲ ದೇಶಗಳಿಗೂ ನ್ಯಾಯಸಮ್ಮತ ಪಾಲು ದೊರೆಯುವಂತಾಗಲು ನೂತನ ಸೂತ್ರವನ್ನು ಕಂಡುಹಿಡಿಯಬೇಕಾಗಿದೆ. ಪರಸ್ಪರ ಐಕ್ಯತೆ ಮತ್ತು ಶಾಂತಿಯಿಂದ ಮಾತ್ರ ಇದು ಸಾಧ್ಯವಾದೀತು.

ಈ ದಿಸೆಯಲ್ಲಿ ಪ್ರಗತಿಪರ ರಾಷ್ಟ್ರಗಳ ಪ್ರತಿಕ್ರಿಯೆ ಆಶಾದಾಯಕವಾಗಿಲ್ಲ. 'ತಾತ್ಕಾಲಿಕ ಪರಿಹಾರ'ದ ತತ್ವದ ಮೇಲೆ ಸುಧಾರಣೆಗಳನ್ನು ರೂಪಿಸುವುದು ಸಾಧುವಲ್ಲ ಅಸಮಾನತೆಯನ್ನು ಅಳಿಸಿ, ಅಪಾಯಗಳಿಂದ ಉಳಿಸಿ, ಪ್ರತಿಯೊಬ್ಬನ ಅಗತ್ಯತೆಗಳನ್ನು ಪೂರೈಸಬಲ್ಲ ವಿಶ್ವಮಾನ್ಯ ಸಾಮಾನ್ಯ ಆರ್ಥಿಕ ಯೋಜನೆಯ ಅಗತ್ಯವಿದೆ. ವಾಣಿಜ್ಯೋದ್ಯಮ ಸುಧಾರಣೆ, ಕೈಗಾರಿಕೋಪಯುಕ್ತ ವಸ್ತುಗಳ ಬೆಲೆಗಳ ನಿಷ್ಕರ್ಷೆ, ನ್ಯಾಯಬದ್ಧ ವಿತರಣೆ ಇವುಗಳ ಮೂಲಕ ಸಮಾನತೆಯನ್ನು ಸಾಧಿಸಬಹುದಾಗಿದೆ. ಭ್ರಾತೃತ್ವ ಭಾವ ಬೆಳೆದಂತೆಲ್ಲಾ ಆರ್ಥಿಕಾಭಿವೃದ್ಧಿ ಹೊಂದಿದವರೊಡನೆ ಸ್ಪರ್ಧಿಸುವ ಶಕ್ತಿ ಮೂಡಬಲ್ಲುದು. ಪ್ರಸ್ತುತ ಅಂತರ ಅಲಿಪ್ತ ಸಹಕಾರದ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಇದನ್ನು ಇನ್ನೂ ವಿಶಾಲಗೊಳಿಸಲು ಇದು ಸಕಾಲವಾಗಿದೆ. 'Non-aligned News Agencies Pool' ರಾಜಕೀಯ ಹಾಗೂ ಆರ್ಥಿಕ ಪ್ರಗತಿಯ ಬಗೆಗಿನ ನಮ್ಮ ಧೃಡ ನಿಲುವನ್ನು ವ್ಯಕ್ತಗೊಳಿಸುತ್ತದೆ. ಸಾಮೂಹಿಕ ಶಕ್ತಿವೃದ್ಧಿಗಾಗಿ ತಾಂತ್ರಿಕ ಕೌಶಲ್ಯವನ್ನು ಬಳಸಲು, ವಸಾಹತು ಆಡಳಿತದ ಧೋರಣೆಯಿಂದ ದೂರವಿರಲು ನೀವೆಲ್ಲರೂ ಸಹಕರಿಸುವಿರೆಂದು ನಂಬಿದ್ದೇನೆ. ಈ ದಿಸೆಯಲ್ಲಿ ಭಾರತವು ಅನೇಕ ರಾಷ್ಟ್ರಗಳಿಗೆ ತನ್ನ ಸ್ನೇಹ ಹಸ್ತವನ್ನು ನೀಡಿದೆ.

ಈಗ ಸವಾಲು ಹಾಗೂ ಸದವಕಾಶಗಳು ನಮ್ಮ ಮುಂದಿವೆ. ಐಕ್ಯತೆಯನ್ನುಳಿಸಿಕೊಂಡು ನಮ್ಮ ಚಳುವಳಿಯ ತತ್ವಗಳಿಗಾಗಿ ತ್ಯಾಗ ಮಾಡುವ ಪ್ರವೃತ್ತಿಯನ್ನು ರೂಢಿಸಿಕೊಳ್ಳುವುದೇ ನಮ್ಮ ಮುಂದಿರುವ ಸವಾಲು. ವಿಶ್ವಮಾನವ ಸ್ವಾತಂತ್ರ್ಯ ಹಾಗೂ ಶಾಂತಿ

[25 ನೇ ಪುಟ ನೋಡಿ]

ಮಾನವ—ನೆಹರೂರವರ ದೃಷ್ಟಿಯಲ್ಲಿ

—ಮಂಜುಳಾ ಪುಟ್ಟರಾಮಯ್ಯ
ಪೂನ.

ಶ್ರೀ ಜವಾಹರಲಾಲ್ ನೆಹರೂರವರು ಓರ್ವ ಮಹಾನ್ ಆದರ್ಶ ವ್ಯಕ್ತಿ. ನೆಹರೂ ಅವರು ಪ್ರತಿಯೊಬ್ಬ ಮಾನವನ ಹೃದಯದಲ್ಲಿಯೂ ದೇವರ ಪ್ರತಿಬಿಂಬವನ್ನು ಕಾಣುತ್ತಿದ್ದರು. ಅವರು ಈ ಬಗ್ಗೆ ಮಾತನಾಡುತ್ತಾ ಒಮ್ಮೆ, "ಮನುಷ್ಯನು ಮನುಷ್ಯನನ್ನು ನಂಬಬೇಕು, ದೇವರು ಇಲ್ಲವೆಂದು ನಾವೆನ್ನಬಹುದು. ಆದರೆ ಮನುಷ್ಯನು ಮನುಷ್ಯನನ್ನೆ ಅಲ್ಲಗೆಳೆದರೆ ವಿಶ್ವದಲ್ಲಿ ಎಲ್ಲವೂ ನಿಷ್ಪ್ರಯೋಜಕವಾಗುತ್ತದೆ." ಎಂದು ಅಭಿಪ್ರಾಯಪಟ್ಟರು. ನೆಹರೂರವರು 'ಡಿಸ್ಕವರಿ ಆಫ್ ಇಂಡಿಯಾ' ಗ್ರಂಥದಲ್ಲಿ ಮಾನವನ ಚೇತನದ ಬಗೆಗೆ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ — "ಮಾನವನ ಚೇತನ ಎಷ್ಟೊಂದು ವಿಲಕ್ಷಣವಾದುದು! ಹಲವಾರು ವಿಫಲತೆಗಳನ್ನು ಅನುಭವಿಸಿದ ನಂತರವೂ ಮಾನವನು ಯುಗಯುಗಳಿಂದಲೂ ತನ್ನ ಒಂದು ಆದರ್ಶಕ್ಕಾಗಿ. ಸತ್ಯ, ನಿಷ್ಠೆ, ಗೌರವಗಳಿಗಾಗಿ ತನ್ನ ಪ್ರಾಣವನ್ನು, ತನಗೆ ಪ್ರಿಯವಾದುದೆಲ್ಲವನ್ನೂ ತ್ಯಾಗ ಮಾಡುತ್ತಾ ಬಂದಿದ್ದಾನೆ. ಈ ಆದರ್ಶವು ಬದಲಾಗಬಹುದು. ಆದರೆ ಅವನ ಆತ್ಮ-ಸಮರ್ಪಣೆಯ ಮನೋಭಾವ ಮಾತ್ರ ನಿರಂತರವಾಗಿ ಮುಂದುವರಿಯುತ್ತದೆ. ಭೀಕರ ವಿಪತ್ತುಗಳ ಮಧ್ಯದಲ್ಲಿಯೂ ಮಾನವನು ಪ್ರತಿಷ್ಠೆಯನ್ನಾಗಲಿ ಅಥವಾ ತನಗೆ ಅತ್ಯಂತ ಪ್ರಿಯವಾದ ಮೌಲ್ಯಗಳ ಬಗೆಗಿನ ನಂಬಿಕೆಯನ್ನಾಗಲಿ ಕಳೆದುಕೊಂಡಿಲ್ಲ. ನಿಸರ್ಗದ ಪ್ರಬಲ ಶಕ್ತಿಗಳ ಆಟದ ವಸ್ತುವಾದ ಮತ್ತು ಮಹಾನ್ ವಿಶ್ವದಲ್ಲಿ ಅಣುರೇಣುಗಳಿಗಿಂತಲೂ ಕಿರಿದಾಗಿರುವ ಮಾನವನು ಸದಾ ನಿಸರ್ಗದ ಶಕ್ತಿಗಳ ವಿರುದ್ಧ ಹೋರಾಡುತ್ತಲೇ ಬಂದಿದ್ದಾನೆ. ಕ್ರಾಂತಿಯ ತೊಟ್ಟಿಲಾಗಿರುವ ಅವನ ಮನಸ್ಸು ಸದಾ ಈ ಶಕ್ತಿಗಳ ಮೇಲೆ ದಿಗ್ವಿಜಯ ಸಾಧಿಸಲು ಯೋಚಿಸುತ್ತಾ ಬಂದಿದೆ". ಜವಾಹರರು ತಮ್ಮ ಈ ಹೊಣೆಗಾರಿಕೆಯನ್ನು ಚೆನ್ನಾಗಿ ಅರಿತುಕೊಂಡಿದ್ದರು.

ಘಂಟೆಗಟ್ಟಲೆ ಪ್ರವಾಸ ಮಾಡುತ್ತಾ ದಿನನಿತ್ಯ ಹತ್ತಾರು ಕಡೆಗಳಲ್ಲಿ ಭಾಷಣ ಮಾಡುವ ಶಕ್ತಿ ನಿಮಗೆ ಹೇಗೆ ಬಂತೆಂದು ಮತ್ತು ಇಷ್ಟು ಶ್ರಮವನ್ನು ಸಹಿಸಿಕೊಳ್ಳುವ ಸಹನೆ ನಿಮಗೆ ಹೇಗೆ ಬಂತು? ಎಂದು ಯಾರಾದರೂ ಕೇಳಿದರೆ, "ಜನರ ಪ್ರೀತಿ ಆದರಗಳಿಂದ" ಎಂದು ತಕ್ಷಣ ಅವರಿಂದ ಉತ್ತರ ಬರುತ್ತಿತ್ತು. ದೇಶದ ಬೃಹತ್ ಜನಸಮುದಾಯವೇ ತಮ್ಮ ಅಸಾಧಾರಣ ಶಕ್ತಿಯ ಮೂಲವೆಂಬುದನ್ನು ನೆಹರೂ ಚೆನ್ನಾಗಿ ಅರಿತುಕೊಂಡಿದ್ದರು. ಜನತೆಯ ಬೆಂಬಲ ಹಾಗೂ ಶುಭಾಶಯಗಳಲ್ಲಿಯೇ ನಮ್ಮ ಶಕ್ತಿ ಅಡಕವಾಗಿದೆಯೆಂಬುದು ಇಡೀ ವಿಶ್ವಕ್ಕೆ ತಿಳಿದಿದೆಯೆಂದೂ ಅವರು ಹೇಳುತ್ತಿದ್ದರು. ನೆಹರೂ ಅವರು ತಾವು ಪ್ರಧಾನಿಗಳಾಗಿದ್ದಾಗ ಸರ್ಕಾರದ ಅಸ್ತಿತ್ವವನ್ನು ಕುರಿತು ಒಮ್ಮೆ ಮಾತನಾಡುತ್ತಾ, "ಜನರು ನಮ್ಮಲ್ಲಿ ನಂಬುಗೆ ಇಟ್ಟಿರುವರೆಂತಲೇ ನಾವಿನ್ನೂ ಅಸ್ತಿತ್ವದಲ್ಲಿದ್ದೇವೆ. ಜನಸಾಮಾನ್ಯರು ನಮ್ಮಲ್ಲಿ ವಿಶ್ವಾಸ ಕಳೆದುಕೊಂಡಾಕ್ಷಣ ನಾನು ಈ ಅಧಿಕಾರದಲ್ಲಿರುವುದೇ ಇಲ್ಲ. ಅವರ ಅಮಿತ ಪ್ರೀತ್ಯಾದರಗಳಿಂದಲೇ ನಾವು ಹೊಣೆಗಾರಿಕೆಯನ್ನು ಆನಂದದಿಂದ ನಿರ್ವಹಿಸುತ್ತಿದ್ದೇವೆ." ಎಂದು ಸ್ಪಷ್ಟಪಡಿಸಿದರು.

ಅವರು ತಮ್ಮ ಉಯಿಲಿನಲ್ಲಿ "ಭಾರತೀಯ ರಿಂದ ನಾನು ಅಮಿತ ಪ್ರೀತ್ಯಾದರಗಳನ್ನು ಪಡೆದಿದ್ದೇನೆ. ಅವರು ತೆಸನಗೆ ತೋರಿಸಿದ ಈ ವಾತ್ಸಲ್ಯದಲ್ಲಿ ಕಿಂಚಿತ್ತನ್ನಾದರೂ ತಿರುಗಿ ಕೊಡಲು ನನಗೆ ಸಾಧ್ಯವಾಗಲಾರದು. ಮೇಲಾಗಿ ಮಮತೆ ತಿರುಗಿ ಕೊಡಲಾಗದಂತಹ ಅಮೂಲ್ಯ ವಸ್ತು. ಅನೇಕರು ನನ್ನ ವಿಷಯದಲ್ಲಿ ಮೆಚ್ಚಿಗೆ ವ್ಯಕ್ತ ಪಡಿಸಿದರು. ಇನ್ನು ಕೆಲವರು ನನ್ನನ್ನು ಗೌರವದಿಂದ ಕಾಣುತ್ತಿದ್ದರು. ಭಾರತದ ಎಲ್ಲಾ ವರ್ಗಗಳ ಜನ ನನ್ನ ಬಗ್ಗೆ ತೋರಿಸಿದ ಗೌರವ ಪ್ರೀತ್ಯಾದರಗಳಿಂದ ನಾನು ಪ್ರಭಾವಿತನಾದೆ," ಎಂದೂ ಹೇಳಿದ್ದಾರೆ.

ಮೂಲ ಅಗತ್ಯಗಳ ವಿಶ್ಲೇಷಣೆ:—

"ಈ ದೇಶದ 36 ಕೋಟಿ ಜನರಿಗೆ ಮುಖ್ಯವಾಗಿ ಏನು ಬೇಕಾಗಿದೆ ?" ಎಂದು ನೆಹರೂ ಅವರು ತಮ್ಮಷ್ಟಕ್ಕೆ ತಾವೇ ಪ್ರಶ್ನಿಸಿಕೊಂಡು ಅದಕ್ಕೆ ಈ ರೀತಿ ಉತ್ತರ ನೀಡಿದ್ದಾರೆ— "ಭಾರತೀಯರಿಗೆ ಮುಖ್ಯವಾಗಿ ಊಟ ಮಾಡಲು ಸಾಕಷ್ಟು ಆಹಾರ, ಉಡಲು ಸಾಕಷ್ಟು ಬಟ್ಟೆ, ಇರಲು ಅನುಕೂಲವಾದ ಮನೆಬೇಕು; ಆರೋಗ್ಯ ಬೇಕು; ಇದು ಸುಸ್ಪಷ್ಟವಾಗಿದೆ. ನಮ್ಮ ಸಾಮಾಜಿಕ ಅಥವಾ ಆರ್ಥಿಕ ಕಾರ್ಯನೀತಿಗಳೇನೇ ಇರಲಿ, ಭಾರತೀಯರಿಗೆ ಮಾತ್ರ ಇವು ಬೇಕೇ ಬೇಕು. ನಾವು ಭಾರತದ ಕೆಲವು ಜಾತೀಯ ಜನರ ಅಥವಾ ಕೆಲವು ಗುಂಪುಗಳ ಏಳಿಗೆಗಾಗಿ ಶ್ರಮಿಸದೆ, ಸಕಲ ಜನಕೋಟಿಯ ಏಳಿಗೆಗಾಗಿ ಶ್ರಮಿಸಬೇಕು, ಸಮಾನತೆಯನ್ನು ತರಬೇಕು. ಇವೇ ನಮ್ಮ ಕಾರ್ಯನೀತಿಯಾಗಬೇಕೆಂದು ನನ್ನ ಮನೋಭಿಲಾಷೆ".

ನೆಹರೂರವರು ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಧಿಕ ಪ್ರಾಧಾನ್ಯ ನೀಡಿದ್ದರು. ಮಾನವನ ರಚನಾತ್ಮಕ ಶಕ್ತಿ ಮತ್ತು ಸಾಹಸ ಪ್ರವೃತ್ತಿ ವರ್ಧಿಸಲೆಂದು ಅವರು ಆಶಿಸುತ್ತಿದ್ದರು.

"ಈ ವಿಶ್ವದ ಭೌತಿಕ ವಸ್ತುಗಳನ್ನು ಉತ್ಪಾದಿಸುವುದಷ್ಟೇ ನಮ್ಮ ಗುರಿಯಾಗಬಾರದು. ನಮ್ಮ ಜೀವನ ಮಟ್ಟ ಹೆಚ್ಚಬೇಕು. ಈ ಗುರಿ ಸಾಧನೆಗಾ[illegible] ನಾವು ರಚನಾತ್ಮಕ ಮನೋಭಾವವನ್ನು, ಸಾಹ[illegible] ಪ್ರವೃತ್ತಿಯನ್ನೂ ಮತ್ತು ಜೀವನವನ್ನು ಸುಂದರವಾಗಿಸು[illegible] ವಸ್ತುಗಳನ್ನೂ ಬಲಿ ಕೊಡಬಾರದು" ಎಂದು ನೆಹರ[illegible] ಅವರು ಅಭಿಪ್ರಾಯ ಪಟ್ಟಿದ್ದರು. ನಮ್ಮ ಸಮಾ[illegible] ದೀನದಲಿತರ ಬಗ್ಗೆ ನೆಹರೂರವರು ತೋರಿಸುತ್ತಿ[illegible] ಅನುಕಂಪ ಸುಪರಿಚಿತವಾಗಿತ್ತು. ಸಮಾಜ[illegible] ಕೆಳವರ್ಗದ ಜನರಿಗೆ ಪ್ರಗತಿ ಸಾಧನೆ[illegible] ಅವಕಾಶಗಳನ್ನು ನಿರಾಕರಿಸುವಂತಹ ಸಮಾ[illegible] ವ್ಯವಸ್ಥೆಯನ್ನು ಅವರು ಖಂಡಿಸಿದರು. ಈ ಬ[illegible] ತಮ್ಮ ವಿಚಾರಗಳನ್ನು ಒತ್ತಿ ಹೇಳುತ್ತಾ ನೆಹರ[illegible] ಅವರು "ಹಿಂದೆ ಸಾಕಷ್ಟು ದುಃಖ ಅನುಭವಿಸಿರ[illegible] ಭಾರತದ ಜನಸಾಮಾನ್ಯರ ಸೇವೆಯು ಅತ್ಯ[illegible] ಮಹತ್ವ ಪೂರ್ಣವಾಗಿದೆ. ಅವರ ಬೇಡಿಕೆಗಳಿಗೆ ಅ[illegible] ಪ್ರಾಶಸ್ತ್ಯ ಕೊಡಬೇಕು. ಅವು ಅವರಿಗೆ ದೊರೆ[illegible]ಲೇಬೇಕು. ಅವರ ಸ್ಥಿತಿಗತಿಗಳನ್ನು ಸುಧಾರಿಸ[illegible] ಇನ್ನಾವುದೇ ಕಾರ್ಯಗಳಿಗೆ ದ್ವಿತೀಯ ಸ್ಥಾನ ದ[illegible]ಯಬೇಕು. ನೈತಿಕ ಅಥವಾ ಮಾನವೀಯ ಕಾ[illegible]ಗಳಿಂದಷ್ಟೇ ಅಲ್ಲ; ರಾಜಕೀಯ, ವ್ಯಾವಹಾರಿಕ ದೃ[illegible]ಯಿಂದಲೂ ಜನಸಾಮಾನ್ಯರ ಜೀವನ ಮಟ್ಟವ[illegible] ಎತ್ತರಿಸುವುದು ಅನಿವಾರ್ಯವಾಗಿದೆ. ಮಾನವ[illegible] ಪ್ರಗತಿಯ ಅವಕಾಶಗಳನ್ನು ನಿರಾಕರಿಸುವ ಬ[illegible] ಸಮಾಜ ವ್ಯವಸ್ಥೆ ಖಂಡನಾರ್ಹ."– ಎಂದು ನೆಹ[illegible] ಅವರು ಹೇಳುತ್ತಿದ್ದರು.

ಮಾನವನ ಪ್ರಗತಿಯನ್ನು ಹೇಗೆ ಅ[illegible] ಲಾಗುತ್ತದೆ ? ಜವಹರಲಾಲ್ ನೆಹರೂ ಅ[illegible] ಇದನ್ನು ಯಾವ ಅಳತೆಗೋಲಿನಿಂದ ಅಳೆಯಬೇಕ[illegible] ದನ್ನು ವಿವರಿಸಿದರು. ಅವರು ಈ ಬಗ್ಗೆ [illegible] ನಾಡುತ್ತಾ "ಪ್ರತಿಯೊಂದನ್ನೂ ಮಾನವೀಯ ಕ[illegible] ದೃಷ್ಟಿಯಿಂದ ಅಳೆಯಬೇಕು. ಈ ದೇಶದ [illegible] ಕೋಟಿಯ ಸುಖದ ಜೀವನವೇ ಪ್ರಗತಿಯ [illegible] ಗೋಲು" ಎಂದು ಜವಾಹರರು ನುಡಿಯುತ್ತಿ[illegible] ವ್ಯಕ್ತಿಯ ಕಲ್ಯಾಣವೇ ಜವಾಹರರ ಮನಸ್ಸಿನಲ್ಲಿ[illegible] ಸ್ಥಾನ ಪಡೆದಿತ್ತು. ಒಂದು ಸಮಾಜ ವ್ಯವಸ್[illegible]

(13ನೇ ಪುಟ ನೆ[illegible]

ವಚನಕಾರರ ಗುರಿಯಾವುದು?

—ಕಣನೂರು ವಿ. ಜಗದೀಶಯ್ಯ

"ಸಾಹಿತ್ಯ ಜೀವನದ ಪಡಿನೆಳಲು" ಎಂಬ ಮಾತನ್ನು ನಾವೆಲ್ಲಾ ಕೇಳಿದ್ದೇವೆ. ಅಂದಮೇಲೆ ಸಾಹಿತ್ಯದ ಕೆಲಸ ಇರುವ ಜನಜೀವನವನ್ನು ಪ್ರತಿಬಿಂಬಿಸುವ ಜತೆಗೆ, ಮಾನವ ಸಂಸ್ಕೃತಿಯನ್ನು ಉಚ್ಚಗೊಳಿಸಿ ಉತ್ತಮ ವಿಚಾರಗಳಲ್ಲಿ ಲೀನವಾಗಿಸುವಂಥ ಜನಜೀವನವನ್ನು ಚಿತ್ರಿಸುವುದಾಗಿದೆ. ಮನುಷ್ಯ ಜೀವನದ ಸಮಗ್ರ ಚಿತ್ರವನ್ನು ಓದುಗರ ಮನಃಫಲಕದ ಮೇಲೆ ಅಚ್ಚೊತ್ತುವ ಜೀವನಶಕ್ತಿ ಸಾಹಿತ್ಯದಲ್ಲಿರಬೇಕು. ಅಂತರಂಗದ ಅಂಧಕಾರ ಇಲ್ಲವಾಗಬೇಕು. ಕೇವಲ ಕಾವ್ಯಾನಂದ ಮಾತ್ರವೇ ಅದರ ಗುರಿಯಾಗಿ ಪರಿಣಮಿಸಬಾರದು. ಇಂತಹ ಒಂದು ಗುರಿ ಕನ್ನಡ ಸಾಹಿತ್ಯದಲ್ಲಿ ಸಾಧಿತವಾಗಿದೆಯೇ ಎಂದರೆ ಹೌದು ಎಂಬ ಉತ್ತರಕೊಡ ವಚನಕಾರರ ಸಾಹಿತ್ಯವನ್ನು ಇಲ್ಲಿ ಉದಹರಿಸಬಹುದು. ಅಲ್ಲದೆ ಶರಣರು ಈಗ್ಗೆ ಎಂಟನೂರು ವರುಷಗಳ ಹಿಂದೆ ಇಂದಿನ ಸಮಾಜವಾದವನ್ನು ಜನತೆಗೆ ತಿಳಿಕನ್ನಡದಲ್ಲಿ ಸಾಮಾನ್ಯರಿಗೆ ತಿಳಿಯುವಂತೆ ವಚನರೂಪದಲ್ಲಿ ಬರೆದಿದ್ದಾರೆ. ಇಂದು ನಮ್ಮ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಜನತೆಗೆ ಘೋಷಿಸಿರುವ 20 ಅಂಶಗಳ ಕಾರ್ಯಕ್ರಮಕ್ಕೂ ಪುಷ್ಟಿಯನ್ನು ಕೊಡುತ್ತವೆ.

ಭಾರತೀಯ ಇತಿಹಾಸದಲ್ಲಿ ಗುಪ್ತರ ಕಾಲವನ್ನು ಸುವರ್ಣಯುಗ ಎಂದು ಕರೆದಂತೆ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ವಚನಕಾರರ ಕಾಲವನ್ನು ಸುವರ್ಣ ಯುಗ ಎಂದು ಕರೆದರೆ ತಪ್ಪಾಗಲಾರದು. 12 ನೇ ಶತಮಾನದಲ್ಲಿ ಉದಯವಾದ ಈ ಸಾಹಿತ್ಯ ಸೃಷ್ಟಿಗೆ ಹಿನ್ನಲೆಯನ್ನು ಯೋಚಿಸಿದಾಗ ವಚನಕಾರರ ಗುರಿ ಏನಾಗಿತ್ತು ಎಂಬುದು ನಿಚ್ಚಳವಾಗಿ ಗೋಚರಿಸುತ್ತದೆ.

"ಈ ಕಾಲದಲ್ಲಿ ರಾಜಕೀಯ ಕೋಲಾಹಲಗಳು ಹೇರಳವಾಗಿದ್ದುವಲ್ಲದೇ ಜನಜೀವನವನ್ನೇ ಅಲ್ಲಾಡಿಸಿ ಹೊಸ ಪಲ್ಲಟಗಳನ್ನು ಬಳಮಾಡಿದ ರಾಜಕೀಯ, ಧಾರ್ಮಿಕ ಪರಿಸ್ಥಿತಿ ತಲೆದೋರಿತ್ತು. ಅಲ್ಲದೆ ವೈದಿಕ ಧರ್ಮ-ಪುಷ್ಟ ಆಚಾರದ ಬೆನ್ನು ಹತ್ತಿತ್ತು. ಅದರಿಂದ ತೋರಿದ ಡಾಂಬಿಕತೆ ಹೆಚ್ಚೂ ಕಡಿಮೆ ಎಂಬ ತಾರತಮ್ಯಭಾವ, ಅಂಧವಿಶ್ವಾಸದಿಂದ ನಡೆಯುತ್ತಿದ್ದ ಸುಲಿಗೆ, ಇವಕ್ಕೆ ಒಂದು ದಾರುಣವಾದ ಪ್ರತಿಭಟನೆ, ಗುಡುಗು ಹಾಕುತ್ತಿದ್ದಿರಬೇಕು. ಇಂತಹ ಪರಿಸ್ಥಿತಿಯಲ್ಲಿ ವಚನಕಾರರಾದ ಶಿವಶರಣರು ಸಿಡಿದೆದ್ದು ನಿಂತರು.

ವಚನಕಾರರ ಗುರಿ ಈ ಒಂದು ಪರಿಸ್ಥಿತಿಯಲ್ಲಿ ಸತ್ಯಸಾಕ್ಷಾತ್ಕಾರವೇ ಹೊರತು ಜನಕ್ಕೆ ಸಾಹಿತ್ಯದ ಸವಿಯನ್ನು ಉಣಬಡಿಸುವುದೇ ಪ್ರಮುಖವಾಗಿರಲಿಲ್ಲ. ಅನ್ಯ ಮತಗಳ ಅಸಹಿಷ್ಣುತೆ ಜಾತಿ ಕಲಹ, ಮತಗಳ ಢಂಬಾಚಾರ, ಸುಲಿಗೆ, ಅತಿಆಸೆ, ಇವುಗಳನ್ನು ನಿರ್ಮೂಲಮಾಡಿ ಮಾನವಪ್ರೇಮ, ನೀತಿನಿಷ್ಠೆ, ಶಿವಭಕ್ತಿ, ಸಮಾಜವಾದ, ಇವುಗಳನ್ನು ಜನರಲ್ಲಿ ಬಿತ್ತಿ ತನ್ಮೂಲಕ ತಾವು ದರ್ಶಿಸಿದ ಸತ್ಯಸಾಕ್ಷಾತ್ಕಾರವನ್ನು ಜನಮನಕ್ಕೆ ಮಾಡಿಸಿ ನವಚೈತನ್ಯದ ಸಮಾಜವನ್ನು ಸೃಷ್ಟಿಸುವುದೇ ಅವರ ಮೂಲಭೂತ ಗುರಿಯಾಗಿತ್ತು. ಸಾಹಿತ್ಯವು ಸಾಮಾನ್ಯ ಜನರಿಗೆ ಅರ್ಥವಾಗದಿದ್ದ ಆ ಕಾಲದಲ್ಲಿ ಸರಳ ಭಾಷೆಯ ಮೂಲಕ ಸತ್ಯದರ್ಶ

ನ ಮೂಡಿಸುವುದೇ ಇವರ ಗುರಿಯಾಗಿತ್ತು. ಅವರ ಸಾಹಿತ್ಯ ಕಾವ್ಯಾನಂದಕ್ಕಾಗಿಯೇ ಆಗಿದ್ದಲ್ಲಿ ಅವರನ್ನು ಕ್ರಾಂತಿಕಾರರು ಎಂದು ಕರೆಯುವಂತಿಲ್ಲ.

ಜೀವನದ ಸತ್ಯಸಾಕ್ಷಾತ್ಕಾರಕ್ಕೆ ಯಾರೂ ಕಾಡಿಗೆ ಹೋಗಿ ತಪ್ಪಸ್ಸು ಮಾಡಬೇಕಾಗಿಲ್ಲ. ಅದು ಗೃಹಸ್ಥ ಜೀವನಕ್ಕೆ ವಿರುದ್ಧವಾದುದೂ ಅಲ್ಲ. ಸಂಸಾರದಲ್ಲಿದ್ದೂ ಆಚಾರವೇ ಸ್ವರ್ಗ, ಅನಾಚಾರವೇ ನರಕ" "ಕಾಯಕವೇ ಕೈಲಾಸ" "ಮಾತೇಜ್ಯೋತಿರ್ಲಿಂಗ" ಇತ್ಯಾದಿಗಳನ್ನು ಸರಿಯಾಗಿ ಅರಿತು ನಡೆದರೆ ಬಾಳಿನ ಸಾಂಫಲ್ಯದ ಸತ್ಯ ಸಾಕ್ಷಾತ್ಕಾರ ಸುಲಭವಾಗಿ ಲಭಿಸುತ್ತದೆ ಎಂದು ಉಪದೇಶಿಸಿದರು.

ಈ ಹಿಂದೆ ಹೇಳಿದಂತೆ ಜನರು ವೈದಿಕ ಧರ್ಮದ ಶುಷ್ಕ ಆಚಾರದ ದೌರ್ಜನ್ಯಕ್ಕೆ ಬಲಿಯಾಗಿ ಅಂಧಕಾರದಿಂದ ಕಲ್ಲನ್ನೇ ಪೂಜಿಸುತ್ತಿದ್ದಿರಬೇಕು. ಆದ್ದರಿಂದಲೇ ಬಸವಣ್ಣನವರು ಹೇಳಿದಂತೆ "ನನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವು' ಎಂದು ಹೇಳಿ ದೇಗುಲಕ್ಕೆ ಹೋಗಿ ಪೂಜೆಮಾಡಿ ಜನತೆಯ ಹಿತಕ್ಕೆ ವ್ಯತಿರಿಕ್ತವಾಗಿ ಕೆಲಸ ಮಾಡಿದರೆ ಏನು ಫಲ ಎಂದು ಹೇಳಿದ್ದಾರೆ.

ಅಲ್ಲಮ ಪ್ರಭುವಿನ ವಿಚಾರ ದರ್ಶನವನ್ನು ಅವರ ಜ್ವಲಂತ ಜ್ಞಾನದರ್ಶನದಲ್ಲಿ, ಮಾನವ ಕಲ್ಯಾಣದ ಬಗ್ಗೆ ಅವರಿಗಿದ್ದ ಜ್ಞಾನವಾರಿಧಿಯಲ್ಲಿ ನೋಡಬಹುದು. ಇವರ ವಿಚಾರಧಾರೆ ಚಿರಂತನ ಸತ್ಯ ಸಾಕ್ಷಾತ್ಕಾರಕ್ಕೆ ದೀವಿಗೆ.

"ತನು ಬತ್ತಲೆಯಿದ್ದೊಡೇನು ಮನಶುಚಿಯಾಗದನ್ನಕ್ಕ ?, ಮಂಡೆ ಬೋಳಾದೊಡೇನು,ಭಾವ ಬಯಲಾಗದನ್ನಕ್ಕ ? ಭಸ್ಮವ ಪೂಸಿದೊಡೇನು, ಕರುಣಾದಿ ಗುಣಂಗಳನ್ನೊತ್ತಿ, ಮೆಚ್ಚಿಸದಡದನ್ನಕ್ಕ ?" ಎಂಬಲ್ಲಿ ಜನಜೀವನದ ನಿಷ್ಠುರ ಸತ್ಯವನ್ನು ಹೊರಗೆಡಹಿ ಇದು ತಪ್ಪು ಎಂದು ಹೇಳುವ ದಿಟ್ಟ ನಿಲುವಿನ ಜೊತೆಗೆ ಜನಕಿಗೆ ಸತ್ಯದ ಪರಿಚಯ ಮಾಡಿಕೊಡುವ ಗುರಿಯಿದೆ. ಇದು ಅಲ್ಲಮನ ಘನ ವ್ಯಕ್ತಿತ್ವದಿಂದ ಹೊರಹೊಮ್ಮಿದ ಅಧಿಕಾರವಾಣಿ ಎಂದೆನ್ನಬಹುದು.

ಕಾರಣ, ಇದನ್ನರುಹಿದ ವ್ಯಕ್ತಿಯಲ್ಲಿ ಹೋರಾಟವಿಲ್ಲ, ಏಳುಬೀಳುಗಳಿಲ್ಲ, ಆತ್ಮವಿಶಾಸವುಳ್ಳ ವಿನಯ ಉಪಕಾರಭಾವವಿದೆ.

ಇನ್ನು ಭಕ್ತಿ ಭಂಡಾರಿ ಬಸವಣ್ಣನವರ ವ್ಯಕ್ತಿತ್ವ ಎಷ್ಟು ಹಿರಿದೋ ಅಷ್ಟೇ ಅವರ ವಚನಗಳು ಶ್ರೇಷ್ಠಮಟ್ಟದ್ದಾಗಿವೆ. "ಕಾಯಕವೇ ಕೈಲಾಸ ದಯವೇಧರ್ಮದ ಮೂಲ, ಸತ್ಯವನುಡಿಯುವುದೇ ದೇವಲೋಕ. ಮಿಥ್ಯವ ನುಡಿಯುವುದೇ ಮರ್ತ್ಯಲೋಕ" ಇತ್ಯಾದಿ ಬಾಳಿನ ಸಾಫಲ್ಯದ ಸೋಪಾನಗಳನ್ನು ತಾವು ಮೊದಲು ಏರಿ ನಡೆನುಡಿಯಲ್ಲಿತೋರಿ ತನ್ಮೂಲಕ ಜನಜೀವನಕ್ಕೆ ಮಾರ್ಗ ತೋರಿದ್ದಾರೆ., "ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" "ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ" "ನುಡಿದರೆ ಮುತ್ತಿನ ಹಾರದಂತಿರಬೇಕು" ಈ ಮಾತುಗಳು ಕಾವ್ಯಧರ್ಮದಿಂದ ಜನರನ್ನು ರಂಜಿಸಿದರೂ ಇಲ್ಲಿ ಮುಖ್ಯವಾಗಿರುವುದು ಕಾವ್ಯಾನಂದವಲ್ಲ. ಜನಜೀವನದ ನ್ಯಾಯನೀತಿಯ ಒರೆಗಲ್ಲಿಗೆ ಹಾಕಿ ಜೀವನವನ್ನು ಸಫಲಗೊಳಿಸಿರುವ ಸತ್ಯ ಸಾಕ್ಷಾತ್ಕಾರದ ದಾರಿ.

ಕಾಯಕದಲ್ಲಿ ನಿರತನಾದೊಡೆ ಗುರುದರ್ಶನವಾದರೂ ಮರೆಯಬೇಕು; ಲಿಂಗಪೂಜೆಯಾದರೂ ಮರೆಯಬೇಕು, ಜಂಗಮ ಮುಂದಿದ್ದೊಡೆಯೂ ಹಂಗು ಹರಿಯಬೇಕು" ಅಲ್ಲದೆ "ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ, ಇಂದಿಂಗೆ, ನಾಳಿಂಗೆ,ಬೇಕೆಂದೆನಾದರೇ ನಿಮ್ಮಾಣೆ ನಿಮ್ಮ ಪುರಾತನರಾಣೆ" ಇಂತಹ ಉದಾತ್ತ ವಚನಗಳನ್ನು ನೋಡಿದಾಗ ಅದರಲ್ಲಿ ಸಾಹಿತ್ಯಾಂಶ, ಕಾವ್ಯಾನಂದ ಇದೆ, ಎಂಬುದನ್ನು ಯಾರೂ ಅಲ್ಲಗಳೆಯಲಾರರೆಂದರೂ ಅದರ ಹಿಂದಿರುವ ಉದಾತ್ತ ಧ್ಯೇಯ ಜೀವನವನ್ನು ನೇರ ರೀತಿಯಲ್ಲಿ ನಡೆಸಲು ಪ್ರಚೋದಿಸುತ್ತಿವೆ. ಎರಡನೆಯ ವಚನದಲ್ಲಿ ಹೇಳಿರುವ ಮಾತುಗಳು ಇಂದಿನ ಸಮಾಜವಾದದ ಧ್ಯೇಯಗಳನ್ನು ನೂರಕ್ಕೆ ನೂರು ಪಾಲು ಪ್ರತಿಬಿಂಬಿಸುತ್ತವೆ.

ಸತಿಪತಿ ಭಾವದಿಂದ ಚೆನ್ನಮಲ್ಲಿಕಾರ್ಜುನ ನನ್ನು ಕೂಡಲು ಸಂಪ್ರದಾಯ ಸಮಾಜದಸಂಕೋಲೆಗಳನ್ನು ನಿರ್ಭಯವಾಗಿ ಕಿತ್ತೆಸೆದು ಹೊರಟ ದಿಟ್ಟ ನಿಲುವಿನ ಅಕ್ಕನ ವಚನಗಳು ಸುಂದರವಾಗಿರುವುವಲ್ಲದೆ, ಭಾವಗೀತೆಯ ಕಾವ್ಯಗುಣ ಹೊಂದಿದ್ದು ಬದುಕಿನ ಚಿರಂತನ ಸ್ಫೂರ್ತಿಯ ಚಿಲುಮೆಯಾಗಿವೆ.

"ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ, ಹಲವು ಪ್ರಾಣಿಯ ಕೊಂದು ನಲಿದಾಡುವ, ತನ್ನ ಮನೆಯಲ್ಲೊಂದು ಶಿಶು ಸತ್ತರೆ ಅದಕ್ಕೆ ಮರಗುವಂತೆ ಅವೆಕ್ಕೇಕೆ ಮರುಗ? ಎಂಬಲ್ಲಿ ಜನತೆಯ ನಿಷ್ಠುರ ನಡತೆಯನ್ನು ತಿದ್ದುವ ಹಂಬಲವಿದೆ.

"ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ
ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕೆ
ನಾಚಿದೊಡೆಂತಯ್ಯ,
ಸಮುದ್ರದ ತಡಿಯೊಳಗೊಂದು ಮನೆಯ
ಮಾಡಿ ನೊರೆ ತೆರೆಗಳಿಗಂಜಿ ದೊಡೆಂತಯ್ಯ"

ಎಂಬ ವಚನದಲ್ಲಿ ಜನತೆಯ ಮಾತಿಗೆ ಓಗೊಟ್ಟು ಸತ್ಯಧರ್ಮಗಳನ್ನು ಬಿಡುವುದು ಹೇಡಿತನ ಎಂದು ಅಕ್ಕನು ಸಾರುವಲ್ಲಿ ಜನತೆಯನ್ನು ಸತ್ಯದೆಡೆಗೆ ಎಳೆದೊಯ್ಯುವ ಮಾಂತ್ರಿಕ ಶಕ್ತಿ ಅಡಗಿದೆ.

"ಗದ್ಯದ ಉಡುಗೆ ಪದ್ಯದ ನಡಗೆಯಲ್ಲಿರುವ ಕಾವ್ಯಾನಂದ, ರಸಾವೇಶ ಎಷ್ಟರ ಮಟ್ಟಿಗೆ ಮೂಡಿ ಬಂದಿದೆ ಎಂದರೆ, "ಅಲ್ಲಮ ಸಂಘಾ ಪ್ರೇಮ ಮೂರ್ತಿಯ ಬುದ್ಧಿಯ ಮಿಂಚನ್ನು ಕಿರಿದಾದ ಜೆಡಗಿನ ನುಡಿಯಲ್ಲಿ ಹಿಡಿದಿಟ್ಟರೆ ಬಸವಣ್ಣನವರ ಭಕ್ತಿ ಭಾವಕ್ಕೆ ಗೊನೆ ಬಾಳೆಯಂತೆ ಬಾಗಿದೆ. ಚನ್ನಬಸವಣ್ಣನವರ ಜ್ಞಾನಕ್ಕೆ ಮಸೆದ ಅಲಗಿನಂತೆ ಹೊಳೆದಿಂದೆದ್ದೆ ಸಿದ್ಧರಾಮರ ಕರ್ಮಕ್ಕೆ ಗುದ್ದಲಿ ಹಿಡಿದು ಸಿದ್ಧವಾಗಿದೆ. ಅಕ್ಕನ ಕಾವ್ಯವಾಣಿಗೆ ಗಿರಿಯ ನವಿಲಿನಂತೆ ಗರಿ ಬಿಚ್ಚಿ ಕುಣಿದಿದೆ, ಕೋಗಿಲೆಯಂತೆ ಹಾಡಿದೆ"

ಸಾಹಿತ್ಯ ಕ್ರೀಡೆಯಿಂದ ದೂರ ನಿಂತೇ ಅವರು ನಮ್ಮ ಸಾಹಿತ್ಯದ ನವೋದಯಕ್ಕೆ ಪ್ರೇರಕ ಶಕ್ತಿಯಾಗಿದ್ದಾರಲ್ಲದೇ ಇಂದಿನ ಸಮಾಜವನ್ನು ತಿದ್ದುವ ಮತ್ತು ರೂಪಿಸುವ ಹೆಗ್ಗುರಿಯೊಡನೆ ಈ ಗುಣಗಳು ನವಿರಾಗಿ ಬೆರತು ಬಂದಿವೆ.

ಶರಣರ ವಚನಗಳು ಭಾರತದ ಜನತೆಯ ಆಶಾಕಿರಣಕ್ಕೆ ಸ್ಫೂರ್ತಿ ಕೊಟ್ಟು ಶಾಂತಿ, ಸಂತೋಷ, ಧರ್ಮ, ಇವುಗಳಿಗ ಪ್ರೇರಕ ಶಕ್ತಿಯಾಗಲೆಂದು ಹಾರೈಸೋಣ. ಈ ಮೇಲಿನ ಎಲ್ಲ ನಿದರ್ಶನಗಳಿಂದ ನಾವು ವಚನಕಾರರ ಗುರಿ ''ಸತ್ಯಸಾಕ್ಷಾತ್ಕಾರವಾಗಿದ್ದಿತೇ ಹೊರತು ಕೇವಲ ಕಾವ್ಯಾನಂದವಾಗಿರಲಿಲ್ಲ'' ಎಂಬುದನ್ನು ತಿಳಿಯಬಹುದಗಿದೆ. —

(10 ನೇ ಪುಟದಿಂದ)

ವ್ಯಕ್ತಿಯನ್ನು ವ್ಯಕ್ತಿಯಿಂದ ಬೇರ್ಪಡಿಸಬಾರದೆಂದು ಅವರು ವಾದಿಸುತ್ತಿದ್ದರು. ವ್ಯಕ್ತಿಯ ಹಕ್ಕುಗಳು ಮತ್ತು ಸಮಾಜದ ಬಗ್ಗೆ ಅವನ ಕರ್ತವ್ಯಗಳು ಇವುಗಳ ನಡುವೆ ಸಮತೋಲವಿರಬೇಕು. ಕರ್ತವ್ಯದ ಬಗ್ಗೆ ಇಂತಹ ನಿರ್ಬಂಧಗಳಿರದಿದ್ದರೆ ವಾಸ್ತವವಾಗಿ ಯಾವ ಹಕ್ಕುಗಳೂ ಇರಲಾರವು. ವ್ಯಕ್ತಿಯ ಸ್ವಭಾವ ಸಿದ್ಧವಾದ ಘನತೆಯ ಬಗೆಗೆ ನೆಹರೂ ಅವರಿಗೆ ಅಚಲವಾದ ನಂಬುಗೆ ಯಿತ್ತು. ನೆಹರೂ ಅವರು ಮಾನವನ ಒಳ್ಳೆಯ ಗುಣಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದದಂತೆ ಅವನ, ದೌರ್ಬಲ್ಯಗಳಿಗಾಗಿ ಎಚ್ಚರಿಕೆ ಕೊಡುತ್ತಿದ್ದರು. ಅವರು ಒಮ್ಮೆ ದೆಹಲಿ ವಿಶ್ವವಿದ್ಯಾನಿಲಯದ ಪದವೀಧರರನ್ನುದ್ದೇಶಿಸಿ ಮಾತಾಡುತ್ತಾ ಹೀಗೆ ಅಭಿಪ್ರಾಯ ಪಟ್ಟರು. ''ಮಾನವನು ತನ್ನನ್ನು ಪೀಡಿಸುತ್ತಿದ್ದ ರೋಗ-ರುಜಿನಗಳ ಮೇಲೆ ವಿಜಯ ಸಾಧಿಸಿದ್ದಾನೆ. ಅವನು ಇನ್ನು ಹಸಿವು, ರೋಗ ಮತ್ತು ದಾರಿದ್ರ್ಯಗಳಿಗೆ ಭಯ ಪಡಬೇಕಾಗಿಲ್ಲ. ಬಾಹ್ಯಾಕಾಶ ಸ್ಪರ್ಧೆಯಲ್ಲಿ ಮಾತ್ರ ಮನುಷ್ಯನ ಮನಸ್ಸು ಗೊಂದಲಕ್ಕೀಡಾಗಿದೆ. ಬಾಹ್ಯಾಕಾಶ ಸಂಬಂಧವಾದ ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹೋಗಿ, ಅವನು ತನ್ನ ಮೇಲಿನ ಹಿಡಿತವನ್ನು ಕಳೆದುಕೊಂಡಿದ್ದಾನೆ. ಪರಿಣಾಮವಾಗಿ ಹೊಸ ಸಮಸ್ಯೆಗಳು, ಹೊಸ ಪ್ರಶ್ನೆಗಳು ಉದ್ಭವಿಸತೊಡಗಿವೆ. ಅಂತಿಮವಾಗಿ 'ನಿನ್ನ ನೀನು ಅರಿತುಕೋ' ಎಂಬ ಹಳೆಯ ನಾಣ್ಣುಡಿ ನಮ್ಮ ಜ್ಞಾಪಕಕ್ಕೆ ಬರುತ್ತದೆ." ಎಂದೂ ನೆಹರೂ ಹೇಳಿದ್ದರು.

ಭಾರತದ ಜನಕೋಟಿಯ ಕಲ್ಯಾಣಕ್ಕಾಗಿಯೇ ಅವರು ಬದುಕಿದರು. ಅದಕ್ಕಾಗಿ ಅನೇಕ ಕಷ್ಟನಷ್ಟಗಳನ್ನು ಸಹಿಸಿ ಕೊನೆಗೆ ಭಾರತೀಯರ ಏಳಿಗೆಗಾಗಿಯೇ ಶ್ರಮಿಸುತ್ತಾ ಮಡಿದ ಜವಾಹರಲಾಲ್ ನೆಹರೂ ಅವರನ್ನು ಈ ನಮ್ಮ ಮುಂದಿನ ಪೀಳಿಗೆಗಳು ಕೃತಜ್ಞತೆಯಿಂದ ಸ್ಮರಿಸಿಕೊಳ್ಳಬೇಕಲ್ಲವೆ?—



ಭಾರತ ನಮ್ಮದು

— ಎಂ .ಎಸ್. ಆರಾಧ್ಯ

ಭಾರತ ನಮ್ಮದು ನಾವೇ ಭಾರತ
ಭಾರತೀಯರು ನಾವೆಲ್ಲಾ
ಭಾರತ ನೀತಿ ಭಾರತ ಪ್ರೀತಿ
ಶೋಭಿಪ ಕಾಂತಿ ಏನಿಲ್ಲ ?

ವಿದ್ಯೆಯೆ ನಮ್ಮ ಬುದ್ಧಿಯು ದೈವ
ವೃದ್ಧಿಯೆ ನಮ್ಮ ಮುದ್ದಿನ ಜೀವ
ತಾಳ್ಮೆಯ ಗುಣವೇ ಜಾಣ್ಮೆಯ ಸ್ನೇಹ
ಎನ್ನುವ ಬದುಕಿನ ಹೆಮ್ಮೆಯ ಗುಡಿಯು ||ಭಾರತ ನಮ್ಮದು||

ಬೆಳೆವ ಎಳೆಯರ ಭವಿಷ್ಯ ಬೆಳಗಿಸಿ
ಬಲಿವ ರಾಷ್ಟ್ರದ ಘನತೆ ಹಿಗ್ಗಿಸಿ
ಹಲವು ಧರ್ಮಗಳ ಐಕ್ಯತೆ ಪೋಷಿಪ
ಪರಮ ಮೈತ್ರಿಯ ಸಮಾನ ತತ್ವದ || ಭಾರತ ನಮ್ಮದು ||

ಕಾಯಕದಲ್ಲಿ ಕಾರ್ಮಿಕ, ರೈತರ
ಕಣ್ಮನ ಸಾಕ್ಷಿಯ ಸ್ವಭಾವ ತಿಳಿದು
ಕರ್ತವ್ಯದಲ್ಲಿ ಅಧಿಕಾರ ಭೃತ್ಯರ
ಸ್ವಾರ್ಥ ತ್ಯಾಗದ ಪ್ರಭಾವ ಅಳೆವ || ಭಾರತ ನಮ್ಮದು ||

ಶಾಂತಿ ಸಹನೆಯ ಸಹಬಾಳ್ವೆಯ ಗುರಿಯು
ಕ್ರಾಂತಿ ವಿಕಸಿಪ ಅಂತಃ ಸ್ಫೂರ್ತಿಯು
ತಾಂತ್ರಿಕ ಮೌಲ್ಯದ ಜ್ಞಾನ ವಿಜ್ಞಾನವ
ಆರ್ಥಿಕ ಪ್ರಗತಿಗೆ ಒಯ್ಯುವ ಅಖಂಡ || ಭಾರತ ನಮ್ಮದು ||

ವಿಶ್ವವೆ ನಮ್ಮ ಬಂಧುಗಳೆಂಬ
ವಿಶ್ವಾಸದ ವಿವಿಧೈಶ್ವರ್ಯ ಬಲವ
ವಿಸ್ತೃತಗೊಳಿಪ ಶ್ರದ್ಧಾ ಸಕ್ತಿಯ
ಸ್ವಸ್ತಿವಾಚನದ ಅಲಿಪ್ತ ಸಿರಿಯು || ಭಾರತ ನಮ್ಮದು ||

ಉಕ್ಕುವ ಶೋಷಣೆ ಪಕ್ಕೆ ಮುರಿಯಲು
ಉಕ್ಕಿನ ಧೈರ್ಯ ತಳೆದ ಪ್ರಧಾನಿಯ
ಸಕ್ರಿಯ ಪಾತ್ರದ ಇಪ್ಪತ್ತಂಶವ
ದಕ್ಕಿಪ ದಲಿತರ ಕ್ಷೇಮಾಭ್ಯುದಯದ || ಭಾರತ ನಮ್ಮದು ||

ಜೇನು ತುಪ್ಪ

— ಬಿ. ಗೋ. ರಮೇಶ್

ಸಮಾಜಜೀವಿ ಜೇನುಹುಳುವಿನ ಕಾಣಿಕೆ ಜೇನುತುಪ್ಪ. ಇದರ ಸಿಹಿಯನ್ನು ಸವಿಯದವರಿಲ್ಲ. ಸಿಹಿಯೂಟ ಕೊಡುವ ಕೀಟ ಜೇನುಹುಳು ಉಪದ್ರವ ಕೊಡುವ ಕೀಟವಲ್ಲ. ಅದನ್ನು ಸರಿಯಾಗಿ ನೋಡಿಕೊಂಡಷ್ಟೂ ಫಲ ಅಧಿಕ. ಹೂಗಳಲ್ಲಿನ ಮಕರಂದವನ್ನು ಹೀರಿ ತಂದು ಸಂಗ್ರಹಿಸುವಾಗ ಅದು ಪಡುವ ಕಷ್ಟ ಅಷ್ಟಿಷ್ಟಲ್ಲ. ತನ್ನದೊಂದು ಮನೆ ಅಲ್ಲಿ ಗೆಳೆಯರೊಡನೆ ವಾಸ; ಆಹಾರ ಸಂಗ್ರಹ, ಜೀವನ, ಇಷ್ಟು ಅದರ ಕೆಲಸ. ಮನುಷ್ಯ ಜೇನುತುಪ್ಪಕ್ಕಾಗಿ ಜೇನನ್ನು ಸಾಕುವುದು ಬಹು ಹಿಂದಿನಿಂದ ಬೆಳೆದು ಬಂದ ಚಟುವಟಿಕೆ. ಇತ್ತೀಚೆಗೆ ಜೇನು ಸಾಕುವುದರಲ್ಲಿ ಆಧುನಿಕತೆ ತಲೆ ಹಾಕಿ ಜೇನುತುಪ್ಪದ ಉತ್ಪಾದನೆ ಹೆಚ್ಚಿದೆ. Honey is wealth ; Honey is health ಎನ್ನುವುದನ್ನು ಸಮಾಜ ಅರ್ಥಮಾಡಿಕೊಂಡಿದೆ.

ಜೇನುತುಪ್ಪ ಕೇವಲ ಸಿಹಿಯಾಗಿರುವ ತಿನಿಸಷ್ಟೆ ಅಲ್ಲ. ಅದು ಆಹಾರವೂ ಹೌದು, ದಿವ್ಯೌಷಧವೂ ಹೌದು. ನಮ್ಮ ಪುರಾತನರು ಮಂತ್ರಗಳಲ್ಲಿ ಮಧುವಿಗೆ ಪ್ರಾಶಸ್ತ್ಯವಿತ್ತು ಗೌರವಿಸಿದ್ದಾರೆ. ಮಧುವಿನ ಮಹಿಮೆಯನ್ನು ಹಲವು ವೈದ್ಯ ಗ್ರಂಥಗಳು ಕೊಂಡಾಡಿವೆ. ಜೇನಿನ ಉತ್ಪಾದನೆಗಳಲ್ಲಿ ಜೇನುತುಪ್ಪವೇ ಅಲ್ಲದೆ ಜೇನಂಟು, ಜೇನುಮೇಣಗಳು ಬಹು ಪ್ರಯೋಜನವುಳ್ಳವು. ಜೇನುಮೇಣವನ್ನವಲಂಬಿಸಿ 300 ಕ್ಕೂ ಹೆಚ್ಚು ಕೈಗಾರಿಕೆಗಳು ನಡೆಯುತ್ತಿವೆ. ಜೇನುತುಪ್ಪವಂತೂ ಮನುಷ್ಯನಿಗೆ ನಿಸರ್ಗದ ವರ. ಆರೋಗ್ಯಕ್ಕೆ ಜೇನುತುಪ್ಪ ಹೆಚ್ಚು ಸಹಕಾರಿಯಾಗಿದ್ದು ಮನುಷ್ಯ ಅದನ್ನು ಮತ್ತೆ ಬಯಸುವಂತಾಗಿದೆ. ಜೇನುತುಪ್ಪ ಸ್ವಾಭಾವಿಕವಾದ ವಾಣಿಜ್ಯೋದ್ದೇಶದ ಪ್ರಮಾಣದಲ್ಲಿ ದೊರೆಯುವ ಏಕೈಕ ಸಿಹಿ ಪದಾರ್ಥ.

ಆಹಾರವಾಗಿ ಜೇನುತುಪ್ಪ

ಎರಡುವರೆ ಪೌಂಡ್ ಹಾಲು, 56 ಔನ್ಸ್ ಹಾಲಿನ ಕೆನೆಯಿಂದ ಕೂಡಿದ ಗಿಣ್ಣು, 12 ಔನ್ಸ್ ಮಾಂಸ, 15 ಔನ್ಸ್ ಮೂಳೆರಹಿತ ಕಾಡ್ಲ ಜಾತಿಯ ಮೀನು, 8 ಕಿತ್ತಲೆ ಹಣ್ಣು ಅಥವಾ 10 ಮೊಟ್ಟೆ, ಇವುಗಳಲ್ಲಿ ಯಾವುದಾದರೊಂದು ಪದಾರ್ಥವು ಒದಗಿಸಬಹುದಾದ ಪೋಷಕಾಂಶಗಳನ್ನು ಕೇವಲ 7 ಔನ್ಸ್‌ಗಳಷ್ಟು ಜೇನುತುಪ್ಪ ಒದಗಿಸಬಲ್ಲುದೆಂದು ಅಂದಾಜುಮಾಡಲಾಗಿದೆ. ಜೇನುತುಪ್ಪ ವಿಪುಲಶಕ್ತಿ ನೀಡುವಂತ ಆಹಾರ. ಹಾಲಿನೊಂದಿಗೆ ಬೆರೆಸಿ ಸೇವಿಸಿದಲ್ಲಿ ಒಂದು ಸಂಪೂರ್ಣ ಆಹಾರ. ಎಳೆಯ ಮಕ್ಕಳಿಗೆ, ವಯಸ್ಸಾದವರಿಗೆ, ದುರ್ಬಲರಾದವರಿಗೆ, ಆಹಾರವಾಗಿ ಕೊಡುವುದು ಭಾರತದಲ್ಲಿ ಪುರಾತನಕಾಲದಿಂದ ರೂಢಿಯಲ್ಲಿದೆ. ಜೇನುತುಪ್ಪ ರಕ್ತದಲ್ಲಿನ 'ಹಿಮೋಗ್ಲಾಬಿನ್' ವೃದ್ಧಿಪಡಿಸುವುದೆಂದು ತಿಳಿದುಬಂದಿದೆ. ಕ್ರೀಡಾಪಟುಗಳು ತಾವು ಕಳೆದುಕೊಂಡ ಸಾಮರ್ಥ್ಯವನ್ನು ಜೇನುತುಪ್ಪದ ಸೇವನೆಯಿಂದ ಮರಳಿ ಪಡೆಯಬಹುದು. ಜೇನುತುಪ್ಪವನ್ನು ಚಳಿಗಾಲದಲ್ಲಿ ಬಿಸಿ ನೀರಿನಲ್ಲೂ ಬೇಸಿಗೆಯಲ್ಲಿ ತಣ್ಣೀರಿನಲ್ಲೂ ಬೆರೆಸಿ ಸೇವಿಸಬೇಕು ಜೇನುತುಪ್ಪ ಮತ್ತು ಮೊಸರು ಇಲ್ಲವೇ ಜೇನುತುಪ್ಪ ಮತ್ತು ಬೆಣ್ಣೆಗಳನ್ನು ಚಪಾತಿ, ರೊಟ್ಟಿ ಆಥವಾ ಬಿಸ್ಕತ್ತುಗಳಿಗೆ ಹಾಕಿದಾಗ ಅತ್ಯಂತ ರುಚಿಯಾಗಿರುತ್ತದೆ. ಜೇನುತುಪ್ಪ ಮತ್ತು

ನಿಂಬೆರಸ ಒಳ್ಳೆಯ ಸಂಯೋಜನೆ. ಬ್ರೆಡ್, ಹೋಳಿಗೆ ಬಿಸ್ಕತ್ತುಗಳನ್ನು ತಯಾರಿಸುವಾಗ ಅವುಗಳಿಗೆ ಜೇನುತುಪ್ಪವನ್ನು ಸೇರಿಸಿದಲ್ಲಿ ಪರಿಮಳ ಭರಿತ ರುಚಿಯು ಅಧಿಕಗೊಳ್ಳುತ್ತದೆ. ಅಲ್ಲದೆ ಬಹುದಿನಗಳವರೆಗೆ ಕೆಡುವುದಿಲ್ಲ. ಜೇನುತುಪ್ಪ ಜೀರ್ಣಾಂಗಗಳಿಗೆ ಯಾವ ತೊಂದರೆಯನ್ನೂ ಉಂಟುಮಾಡುವುದಿಲ್ಲ. ಮಿಗಿಲಾಗಿ ಜೇನುತುಪ್ಪದಲ್ಲಿ ಅಡಗಿರುವ ಹೆಚ್ಚು ಪ್ರಮಾಣದ ಸರಳರೀತಿಯ ಸಕ್ಕರೆಗಳಲ್ಲಿಯೇ ಅದರ ವಾಸ್ತವಿಕ ಬೆಲೆ ಇರುವುದು.

ಔಷಧಿಯಾಗಿ ಜೇನುತುಪ್ಪ

ಆಯುರ್ವೇದ ಮತ್ತು ಯುನಾನಿ ಪದ್ಧತಿಗಳ ಔಷಧಿಗಳಲ್ಲಿ ಜೇನುತುಪ್ಪದ ಉಪಯೋಗವಿದೆ. ಮನೆಯ ಔಷಧಿಗಳಲ್ಲಿ ಮತ್ತು ಕುಂಟುಮದ್ದುಗಳಲ್ಲಿ ಜೇನುತುಪ್ಪ ಇದೆಯೆಂಬುದು ಅದರ ರೋಗ-ಗುಣಕಾರಕ ಸಾಮರ್ಥ್ಯದ ಬಗ್ಗೆ ಗೃಹಿಣಿಯ ನಂಬಿಕೆಯ ಆಳತೆಗೋಲಾಗಿದೆ. ಔಷಧವಾಗಿ ಜೇನು-ತುಪ್ಪ ಒಳ್ಳೆ ವಿರೇಚನಕಾರಿ. ರಕ್ತವನ್ನು ಶುದ್ಧಿಗೊಳಿಸುವ ಸಾಧನ. ಶೀತ, ಕೆಮ್ಮು, ಜ್ವರಗಳನ್ನು ತಡೆಗಟ್ಟಲು ಇದರ ಉಪಯೋಗವಿದೆ. ಪುಷ್ಟಿಕರವಲ್ಲದ ಪರಿಸ್ಥಿತಿ ಜೊತೆಗೆ ಲಘು ಹೃದಯಾಘಾತವಿರುವವರು, ಅಜೀರ್ಣ ರೋಗಿಗಳು, ಜೇನುತುಪ್ಪ-ವನ್ನು ಯಾವಾಗಲೂ ಸೇವಿಸುವುದು ಬಹಳ ಗುಣಕಾರಕ. ಆರೋಗ್ಯದೃಷ್ಟಿಯಿಂದ ನೋಡಿದಾಗ, ಜೇನುತುಪ್ಪ ಹಾಲಿಗಿಂತ ಅತ್ಯಂತ ಸುರಕ್ಷಿತ ಪದಾರ್ಥ. ಹಾಲು ರೋಗಾಣುಗಳು ಹರಡಲು ಸೂಕ್ತ ಸಾಧನವಾಗುತ್ತದೆ. ಜೇನುತುಪ್ಪ ರೋಗಾಣುಗಳ ವಿರೋಧಿ ; ಮೊಣಕಾಲುಗಳ ನೋವನ್ನು ವಾಸಿಮಾಡಲೂ ಸಹ ಜೇನುತುಪ್ಪವನ್ನು ಉಪಯೋಗಿಸುತ್ತಾರೆ.

ಇತರ ಉಪಯೋಗಗಳು

ಜೇನುತುಪ್ಪ ಕೆಲವು ಸಾಮಾನ್ಯ ಉಪ-ಯೋಗಗಳಿಗೂ ನೆರವಾಗುತ್ತದೆ. ಕಾರುಗಳಲ್ಲಿ ಉಪಯೋಗಿಸುವ ಆಘಾತ ಹೀರುಕ(Shock absorber) ಗಳಲ್ಲಿ ಗಾಲ್ಫ್ ಚೆಂಡುಗಳ ಒಳಭಾಗದಲ್ಲಿ ಜೇನುತುಪ್ಪದ ಬಳಕೆಯಿದೆ. ಜೇನುತುಪ್ಪ-ವನ್ನು ಬಳಸಿ ಸಸ್ಯಗಳಲ್ಲಿನ ಬೆಳವಣಿಗೆಯನ್ನು ಪ್ರಚೋದಿಸಬಹುದು. ಸಸ್ಯದ ರೆಂಬೆಗಳ ತುಂಡುಗಳಲ್ಲಿ ಬೇರು ಬರುವಂತೆ ಮಾಡಲು ಸಹಕಾರಿ. ಮೊಟ್ಟೆಗಳಲ್ಲಿನ ಅಂಟಾಗುವಿಕೆಯನ್ನು ಜೇನುತುಪ್ಪ ಬಳಸಿ ತಡೆಯಬಹುದು

ಜೇನುತುಪ್ಪವನ್ನು ಎಲ್ಲರೂ ಉಪಯೋ-ಗಿಸಬಹುದಾಗಿದೆ. ಇದೊಂದು ಶುದ್ಧ ಆಹಾರ. ಜೇನುತುಪ್ಪದ ಉತ್ಪಾದನೆ ತೀವ್ರ ಆಗಬೇಕಾದ ಕೆಲಸ. ಆಧುನಿಕ ಜೇನುಸಾಕಣೆ ವಿಧಾನಗಳನ್ನನು-ಸರಿಸಿ ಜೇನುಸಾಕಣೆಗಾರ ಹೆಚ್ಚಿನ ಲಾಭ ಪಡೆಯಬಹುದಾಗಿದೆ. —

ಕನ್ನಡ ಸೂಕ್ತಿ ಸಂಹಿತೆ

ಯತ್ನದ ಮೇಲ್ಮೆ

ದೈವವೇ ಮೇಲೆಂದು ಯೋಚಿಸಿ
ತನ್ನ ಯತ್ನವ ಬಿಡದಿರು

† † † †

ಪ್ರಾಜ್ಞನ ತ್ಯಾಗ

ಸರ್ವನಾಶ ಒದಗಿ ಬರಲು
ಪ್ರಾಜ್ಞ ಅರ್ಧ ಬಿಡುವನ

† † † †

ಯುಕ್ತಿಯ ಮಾತು

ಮಗು ಹೇಳಿದರೂ ಗಿಳಿ ನುಡಿದಿದ್ದರು
ಯುಕ್ತಿಯ ಮಾತನು ಸ್ವೀಕರಿಸು

ಜಾನಪದ ಜೇನು

ತಾಯಿಲ್ಲದ ತವರು

—ಪ. ರಾಮಕೃಷ್ಣಶಾಸ್ತ್ರಿ

"ನಮ್ಮೂರ ಬೈಲಲ್ಲ ಹನ್ನೆರಡು ಕೊಡೆ ಕಂಡೆ. ನಮ್ಮಣ್ಣನಪ್ಪ ಬರುವುದು ಅತ್ತೀಗೆ ಸಣ್ಣಕ್ಕಿ ಎಸರ ಇಡುಬೇಗ" ಎಂದು ಕಮಲೆ ಅವಸರಿಸಿದಳು. ಹೆಗಲ ಮೇಲೆ ಜವುಳಿಯ ಹೊತ್ತುಕೊಂಡು ಮುದ್ದು ಮುಖದ ಅಣ್ಣ ಬಂದನು. 'ಸಣ್ಣಕ್ಕಿ ಬಿಳಿ ಉದ್ದು, ಗೊನೆಯ ಬಾಳೆಹಣ್ಣು ನೆನೆದಂತೆ, ಬಾಳೆಯ ಸುಳಿಯಂತೆ ತೋಳ ತಿರುವುತ' ಬಂದ ಹಿರಿಯಣ್ಣನಿಗೆ ಗಿಂಡಿಯಲ್ಲಿ ಹಾಲು ಕೊಟ್ಟು, ಕುಳ್ಳಿರಲು ಮಣೆ ಹಾಕಿ, ತವರಿನಲ್ಲಿ ಎಲ್ಲರೂ ಚೆನ್ನಾಗಿದ್ದಾರೆಯೇ ?" ಎಂದು ಕೇಳುತ್ತಾಳೆ.

'ಎಲ್ಲರು ಚಂದವಿಹರವ್ವ ಮಲ್ಲಿಗೆ ಮುಡಿಯ ತಂಗಿ ನಾಲ್ವರಿಗಿಂತ ಕಿರಿಯ ತಮ್ಮನ ಮದುವೆ ನೀ ಬರಬೇಕು ಮದುವೆಗೆ' ಎನ್ನುತ್ತಾನೆ ಅಣ್ಣ ಆದರೆ ಕಮಲೆಗೆ ಕೈತುಂಬ ಕೆಲಸ. ಅಡಕೆ ಸುಲಿಯಬೇಕು, ಬತ್ತ ಮಿಡಿಯಬೇಕು ನಾನೆಂತು ಬರಲಿ ತವರೀಗೆ ಅಣ್ಣಯ್ಯ ಮತ್ತೆಂಗೆ ಬರಲಿ ಮದುವೇಗೆ ?' ಎಂದು ಹಲಬುತ್ತಾಳೆ. 'ಆ ಕೆಲಸಕ್ಕೆಲ್ಲ ಆಳನ್ನು ಕಳುಹಿಸುತ್ತೇನೆ ಬಾರವ್ವ, ನೀನು ಬಾರದೆ ನಾನು ಹೋಗಲಾರೆ' ಎಂದು ಅಣ್ಣ ಒತ್ತಾಯಿಸಿದ ಮೇಲೆ ಅವಳು ಸಿರಿಹೊನ್ನೆ ಮರದ ಕೆಳಗೆ ಮರಿಯಾನೆ ಮೇಯಿಸುವ ಮೈದುನನ ಬಳಿಗೆ ಹೋಗಿ "ಮೈದುನಾ ತವರಿಗೆ ಹೋಗಿ ಬರುವೆನು" ಎಂದು ತಿಳಿಸುತ್ತಾಳೆ. ಆಗ ಸರಸಗಾರ ಮೈದುನ,

ತವರೊಳ್ಳೇದೆಂದು ತವರಲ್ಲೇ ಇರಬೇಡ
ತವರಿಗೆ ತವರು ಪ್ರತಿ ತವರು- ನಾವೆಲ್ಲ
ಬೇಗ ಹಿಂದಿರುಗು ಅತ್ತಿಗೆಮ್ಮಾ

ಎಂದು ಹೇಳುತ್ತಾನೆ, ಬಳಿಕ ಕಮಲೆ ಗಂಡನ ಬಳಿ ಹೋಗಿ 'ತಂಗಿ-ತಂಗೀ ಬಾರ, ತಾಂಬೂಲ ತುಟಿ ಬಾರ, ಸೆಟ್ಟಿ ಸಾಹುಕಾರರ ಸೊಸೆ ಬಾರ, ನನ ತಂಗಿ ಬಂಗಾರ ಬಾರ ಮದುವೆಗೆ' ಎಂದು ಅಣ್ಣ ಕರೆಯುತ್ತಿದ್ದಾನೆ. 'ಪಟ್ಟೆ ಮಂಚದ ಮೇಲೆ ಮಲಗಿರುವ ರಾಯರೇ ಹೋಗಿ ಬರುವೆನು ತವರಿಗೆ' ಎಂದು ಅಪ್ಪಣೆ ಬೇಡುತ್ತಾಳೆ.

ಗಂಡನಿಗೆ ಅವಳ ತವರವರನ್ನು ಕಂಡರೆ ಆಗದು. 'ಚಿನ್ನದ ಉಡದಾರ ಚಿನ್ನದ ಉಂಗುರ ಮಗನಿಂಗೆ ರನ್ನದ ಕಾಲ್ಗಡಗ- ಎಲೆಹೆಣ್ಣೆ ಕದ್ದುಕೊಂಡಾರು ನಿನ್ನ ಅಪ್ಪಮ್ಮ' ಎಂದು ಸಂಜಾಡುತ್ತಾನೆ. ', ಸಾವಿರಕೆ ಸತ್ಯರು ನೂರಕೆ ಧರ್ಮರು ಆಗ ಬಿತ್ತಿದರೆ ಬೆಳೆವರು ನಮ್ಮವರು ಬಲವಂತರವರು ತವರವರು "ಎಂದು ಅವಳು ತವರಿನ ಮೇಲ್ಮೆಯನ್ನು ಹೇಳುತ್ತಾಳೆ. "ಹಿಂದಿರುಗಿ ಯಾವಾಗ ಬರುತ್ತೀ ? ಎಂದು ಗಂಡ ಕೇಳಿದಾಗ "ತಿಂಗಳ ಮೇಲೆ ಹದಿನೈದು ದಿವಸಕ್ಕೆ ತಮ್ಮನ ಕರಕೊಂಡು ಬರುತ್ತೇನೆ" ಎಂದುತ್ತರಿಸಿ ಹತ್ತಿ ಮರದ ಕೆಳಗೆ ಕುಳಿತ ಅತ್ತೆಮ್ಮನ ಬಳಿಗೆ ಬಂದು ಅಪ್ಪಣೆ ಕೇಳುತ್ತಾಳೆ. ಅತ್ತೆ ಹೇಳುತ್ತಾಳೆ.

ಹೋಗಿ ಬಾರೇ ನೀನು ವಜ್ರದೋಲೆ ಕಿವಿಯೋಳೆ
ಕೆನ್ನೇಲಿ ಸೂರ್ಯ ಹೊಳೆವವಳೆ। ಸೂಸೆ ಮುದ್ದೆ
ತವರೊಳ್ಳೇದೆಂದು ಇರಬೇಡ ॥

ಕಮಲೆ ಅಂದಣವನ್ನೇರಿ ಅಣ್ಣನ ಮನೆಗೆ ಹೋದಳು. ಮನೆಯನ್ನು ತಲುಪಿದಾಗ ತಂಗಿಯನ್ನು ನೆರಳನಲ್ಲಿ ನಿಲ್ಲಿಸಿ. "ಇಲ್ಲಿ ನಿಂದಿರು. ಒಳಗ್ಹೋಗಿ ರಂಭೆಗೆ ಹೇಳಿ ಬರುತ್ತೇನೆ" ಎಂದು ಅಣ್ಣ ಹೇಳಿದ. ಒಳಗೆ ಹೋಗಿ ಹೆಂಡತಿಯನ್ನು ಕುರಿತು "ಅಂದದಲಿ ಅತ್ತೆಯ ಮಗಳೆ ಚೆಂದದಲಿ ಮಾವನ ಮಗಳೆ ಅತ್ತಣ ಊರಿಂದ ಎನ ತಂಗಿ– ಬಂದಿಹಳು ನೀನೊಂದು ಮಾತು ಕರೆ ಹೋಗು" ಎನ್ನುತ್ತಾನೆ ಅವಳನ್ನು "ಚಿನ್ನವೇ ರನ್ನವೇ ಪಟ್ಟದ ರಾಣಿಯೇ ಎಳೆ ಬಾಳೆ ಸುಳಿ ಅಪರಂಜಿ" ಎಂಬೆಲ್ಲ ರಮಿಸುತ್ತಾನೆ. ಆ ಹೆಂಡತಿ ತಾಟಕಿ, ಗಯ್ಯಾಳಿ ಅವಳು ಕಿಡಿಕಿಡಿಯಾಗಿ,

ಪ್ರೀತಿಯಲಿ ಕರೆಯೋಕೆ ಅಕ್ಕಲ್ಲ ತಂಗ್ಯಲ್ಲ
ಕುಟ್ಟಿದ ಅಕ್ಕಿ ಮನೇಲಿಲ್ಲ। ಬತ್ತ ಇಲ್ಲ
ನೀವು ತಂದ ಸೌದೆ ಒಲೆಗಿಲ್ಲ.॥

ಎಂದು ಹೊಗೆಯಾಡುತ್ತಾಳೆ. ಇಷ್ಟೇ ಅಲ್ಲ "ಹಿಂದಿನ ಕಾಲದಿ ತೆಗಳಿದ್ಲು ಭಂಗ ಪಡಿಸಿದ್ಲು ಬೈದಿದ್ಲು ನಿಮ್ಮ ತಂಗಿಯ ಹಂಗೇನು ಆಚೆ ಇರ ಹೇಳಿ" ಎನ್ನುತ್ತಾಳೆ ಕಟುವಾಗಿ. ಉಪಾಯವಿಲ್ಲದೆ ಅಣ್ಣನೇ ಹೋಗಿ ತಂಗಿಯನ್ನು ಕರೆಯುತ್ತಾನೆ.

'ಅಣ್ಣನ ಮನೆಯೊಳಗೆ ಅಳುಕಿ ಹೋದಳು ತಂಗಿ, ತಾಯಿಯ ಸಾವ ನೆನೆನೆನೆದು, ದುಃಖಿಸುತ ಬಂದಳು ಮನೆಯ ಒಳಗಡೆಗೆ. ಅಡುಗೆಯ ಮನೆಯಲ್ಲಿ ಕಂಡಾಳತ್ತಿಗೆಯನ್ನು ಪ್ರೀತಿಯ ಸೂಸಿನಗೆ ಸೂಸಿ, "ಅತ್ತಿಗೆ, ಮನೆಯಲ್ಲಿ ಎಲ್ಲಾ ಕ್ಷೇಮವೇ?" ಎಂದು ಪ್ರಶ್ನಿಸಿದಳು. 'ನಾದಿನಿ ಹೇಳಿದ ಮಾತು ಕೇಳಿದಳತ್ತಿಗೆ ಮನದಲ್ಲೆ ಸಿಟಿಗೆ ಮುರಿಯುತ,' "ನೀ ಬರಲು ನಮಗಿನ್ನೆಲ್ಲಿ ಕ್ಷೇಮವು" ಎಂದುಕೊಳ್ಳುತ್ತಾಳೆ. "ಬೇಸಗೆ ಬಿಸಿಲಿಂಗೆ ಬಸವಳಿದು ಆಸು ಬಂದೆ; ಕುಡಿಯಲು ತಂದು ನೀರನ್ನು ಕೊಡು ಅತ್ತಿಗೆ ಆಸರಿಲಿ ತುಂಬ ಬಳಲಿರುವೆ" ಎಂದು ಕಮಲೆ ಬೇಡುತ್ತಾಳೆ–ತನಗಾದ ನಿರಾಶೆಯನ್ನು ಹತ್ತಿಕ್ಕಿಕೊಂಡು

ಇಂದು ನೀರೂ ಇಲ್ಲ ತಂದ ನೀರೂ ಇಲ್ಲ.
ಹಿಂದಕ್ಕೆ ಹೊರಡು ಎಲೆ ಹೆಣ್ಣೆ। ನಿನ್ನಣ್ಣನ
ನೀರಿನ ತೊತ್ತು ನಾನಲ್ಲ॥

ಎಂದುತ್ತರಿಸುತ್ತಾಳೆ ಅತ್ತಿಗೆ. ಆ ಮಾತಿನಿಂದ ಆಘಾತಗೊಂಡ ಕಮಲೆ "ನಾವು ಬೇರೆಯವರಲ್ಲ. ಒಂದೇ ಮನೆಯವರು. ಹೊಟ್ಟೆ ತುಂಬಾ ಹಸಿದಿಹುದು ಅತ್ತಿಗೆಮ್ಮ ಅನ್ನವ ಮಾಡು ಬಡಿಸೇಳಿ" ಎಂದು ಹೇಳುತ್ತಾಳೆ. "ಅನ್ನವ ಮಾಡಲು ಒಲೆಯೇ ಇಲ್ಲ. ಇಲ್ಲಿ ನಿಮ್ಮಣ್ಣ ಮನೆ ಬಿಡುವಾಗ ಒಲೆಯನ್ನು ಕಿತ್ತುಕೊಂಡೇ ಹೋಗಿಹರು. ಒಲೆಯೇ ಇಲ್ಲದ ಮೇಲೆ ಅಡಿಗೆ ಮಾಡಲಿ ಹೆಂಗೆ? ನೆರೆ ಮನೆಗೆ ಪಡಿಯ ಕೊಡುವೆನು ನಾದಿನಿ, ಬಂದ ಹಾದಿಲೆ ಹೊರಡಿನ್ನು" ಎಂದು ಅತ್ತಿಗೆ ಕಿಡಿ ನುಡಿಯುತ್ತಾಳೆ. ಅಷ್ಟಕ್ಕೇ ನಿಲ್ಲಿಸದೆ, "ನಿನ್ನ ಅರು ಕರೆದರು ಕೆಂಪು ಸೀರೆಯ ಚೆಲುವೆ ಅಣ್ಣನ ಮನೆಯ ಕಣಜವು ಅರಮನೆಯ ಬೊಕ್ಕಸವೆಂದು ತಿಳಿದ್ಯೇನು?" ಎಂದು ಕಟಕಿಯಾಡುತ್ತಾಳೆ.

ಅತ್ತಿಗೆಯ ನುಡಿ ದುಃಖ ಉಕ್ಕುತ ಬಂತು; ಕಣ್ಣಲ್ಲಿ ನೀರು ಹರಿಯಿತು; ನಾದಿನಿಗೆ ಅತ್ತಿಗೆಯ ಮಾತು ಅಲುಗಾಯ್ತು; ಕೂಡಲೇ ಅಣ್ಣನ ಬಳಿಗೆ ಧಾವಿಸಿ,

ಎತ್ತನ್ನು ತರಿಸಣ್ಣ ಪಟ್ಟೆಯ ಬಿಗಿಸಣ್ಣ
ಥಟ್ಟನೆ ಎನ್ನ ಕಳಿಸಣ್ಣ। ಕಣ್ಣೀರು
ಸ್ವಾತಿಯ ಮಳೆಯಾಗಿ ಇಳಿದೀತು॥

ದುಃಖ ಉಕ್ಕಿ ಬಂದು ನುಡಿಯುವಳು. ಅಣ್ಣನ ಕೊರಳು ತುಂಬಿ ಬಂತು. ಹೆಂಡತಿಯ ಅವನೂ ಬಲ್ಲ. "ಪಾಪಿ ತವರಿಗೆ ಯಾಕೆ ಬಂದೆ ತಂಗೆವ್ವ? ತಾಟಗಿತ್ತಿ ಹಾಳು ಮನೆಯಲ್ಲಿ ತಂಗೆವ್ವ ತಂಗೆವ್ವ ಎನ್ನ ತೋಟ ನೋಡಿ ತಿರುಗಮ್ಮ" ಎಂದನು. "ತೋಟವ ನೋಡಿದೆ ಗದ್ದೆಯ ನೋಡಿದೆ, ನೋಡಿದೆ ಅಣ್ಣನ ಭುಜಬಲವ-ಅಣ್ಣಯ್ಯ ಮಡದಿಗಂಜುವ ನಿನದು ಸುಖ ಬಾಳೋ?" ಎಂದು ಕಮಲೆ ಅಳುತ್ತಾಳೆ. "ಏಕಳುವೆ ಎನ ತಂಗಿ ಬೇಕಾದ್ದು ನಿನಗಿರಲು ಎಂದು ಸಂತೈಸುವನು ಅಣ್ಣ "ಕೈ ತುಂಬಾ ಬಳೆಯಿದೆ; ಕಟ್ಟಿ ತಂದ ಬುತ್ತಿಯಿದೆ

ಹೋಗಿ ಬರುತ್ತೇನೆ. ಉಂಡು ಬಂದೆ ಊರಿಂದ; ನಿಂದು ಬಂದೆ ಹೊಳೆಯಿಂದ; ರಸದಾಳೆ–ಕಬ್ಬು ಜಗಿದು ಬಂದೆ ಮನೆಯಿಂದ.'' ಎಂದು ಹೊರ ಬಾಗಿಲಿಗೆ ಬಂದು ನಿಂತಳವಳು. ಅಲ್ಲಿ ಹೇಳುತ್ತಾಳೆ:

ಹೋಗ್ತೀನಿ ಹೊಸ್ತಿಲೆ, ಹೋಗ್ತೀನಿ ಬಾಗಿಲೆ,
ಹೋಗ್ತೀನಿ ಹೊನ್ನ ನಡುಮನೆಯೆ। ತಾಯಿಲ್ಲದ
ತವರೀಗೆ ನಾವು ಬರಲಾಗದು ॥

ತಾಯಿಲ್ಲದ ತವರಿಗೆ ಹೋಗುವವರು ದಡ್ಡರು. ನೀರಿಲ್ಲದ ಕೆರೆಗೆ ಕರು ಹೋಗಿ ಅಳುವಂತೆ ಹೆಣ್ಣಿನ ಗೋಳು. ತಾಯಿಲ್ಲದ ಮೇಲೆ ಇರಬಾರದು ಈ ಜನ್ಮ. ಹಡೆದವ್ವ ಇರುತ್ತಿದ್ದರೆ ಉಡಿಗೆ ಅವಲಕ್ಕಿ ಹಾಕಿ ಹರದಾರಿವರೆಗೆ ಬರುತ್ತಿದ್ದಳು ಆದರೆ ಅತ್ತಿಗೆ 'ಬಾಗಿಲ ಬಿಟ್ಟು ಇಳಿಯಳು' ಹಡೆದವ್ವ ಇರುತ್ತಿದ್ದರೆ ನೆತ್ತಿಗೆ ಒತ್ತಿ ಸ್ನಾನ ಮಾಡಿಸಿ, ಉಣಬಡಿಸಿ, ಅಷ್ಟು ದೂರ ಬರುತ್ತಿದ್ದಳು. ಆದರೆ ಅತ್ತಿಗೆ ದೋಸೆ ಕಾವಲಿ ಬಿಟ್ಟು ಕದಲಳು. ಹೀಗೆಂದು ಮನದಲ್ಲೇ ಬೆಂದು ನೊಂದ ಹೆಣ್ಣು, "ಅತ್ತಿಗೆ ಬಸುರಾಗಲಿ, ಹತ್ತೆಮ್ಮ ಕರೆಯಲಿ, ಅತ್ತೆಮ್ಮ ಎಂದು ಕೂಗಲಿ ನಿನ್ನ ಮಕ್ಕಳು" (ಆಗ ಗೊತ್ತಾದೀತು ನಿನ್ನ ಹೆಣ್ಮಕ್ಕಳಿಗೂ ಅತ್ತೆ ಮನೆಯಿಂದ ತವರ್ಮನೆಗೆ ಬರುವ ಸುಖ!) ಎಂದು ಶಾಪರೂಪವಾಗಿ ಹರಸಿ ಹೊರಟಳು. ಆಗ ಅಣ್ಣ ದುಃಖಿಸುತ್ತಾನೆ.

"ಹೋಗೆಂದ ಮಾತಿಂಗೆ ಹೊರಟೆಯಾ ತಂಗೆವ್ವ? ಮೂರು ಕಾಸಿನ ಮಡದಿಯು ಮಾತಿಗೆ ಹಾಲಿನಂಥ ತವರ ತೋರಿತೀಯಾ" ಎಂದು ಸಂಕಟ ಪಡುತ್ತಾನೆ ಅಣ್ಣ. ''ಹುಟ್ಟಿದ ಮನೆಯನು ಆನೆಂತು ತೊರೆದೇನು " ಎಂದು ಹೇಳಿದ ಕಮಲೆ, ''ಹೆಣ್ಣಿನ ಮಾತು ತಿಳಿದಾವೋ ಅಣ್ಣಯ್ಯ ನಿನ್ನಾಣೆ ನೀನು ಹೊಡಬೇಡ' ಎಂದು ಅತ್ತಿಗೆಗೆ ಹೊಡೆಯಬಾರದೆಂದ ಯಾಚಿಸುವಳು. ಕಟ್ಟಿದ ಬುತ್ತಿಯಿದೆ ಪುತ್ತೂರ ಸಂತೆಯಿದೆ ಹೋಗುವ ಹಾದಿ ಬೆಂಗಾವಲಿಗೆ ಶಿವನಿಹನು' ಎನ್ನುತ್ತ ತನ್ನ ಮನೆಗೆ ತಲುಪಿದಳು.

"ಇದು ಏನು ಅತ್ತಿಗೆ ಹೋದಂತೆ ಬಂದಂತೆ; ನಿನ್ನ ಮಾಯವು ತಿಳಿಯದು. ಅತ್ತಿಗೆ ಹೋದ ಕಾರ್ಯವು ಗೆಲಲಿಲ್ವೇ ?' ಎಂದು ಮೈದುನ, ನಾದಿನಿಯುವರಿಂದ ಪ್ರಶ್ನೆಗಳ ಸುರಿಮಳೆ ಇವಳೂ ಇದ್ದ ಸಂಗತಿ ಮುಚ್ಚಿಟ್ಟು 'ನಮ್ಮ ಶಕುನಾವ ನೀವೇನು ಬಲ್ಲಿರಿ ? ದಾರೀಲಿ ಏಳು ಹೆಡೆಯ ಏಳೆನಾಗರ – ಕಂಡು ಹಿಂದುರುಗಿದೆ ನನ್ನರಮನೆಗೆ' ಎನ್ನುತ್ತಾಳೆ, ಪತಿರಾಯನು ಯಾಕಲೆ ಹೆಣ್ಣೆ ಇಷ್ಟು ಬೇಗನೆ ಬಂದೆ ? ಕುಂದಿ ಹುದು ಕಂದಿಹುದು ಮುಖ ಕಮಲೆ ಮಡದೀಯ ಇಂದೇಕೆ ಎಂದಿನ ಕಳೆಯಿಲ್ಲ ? ಎಂದು ಪ್ರಶ್ನಿಸಿದಾಗ '' ಹಾದೀಲಿ ಹುಲ್ಲೆ ಕಂಡೆ, ಪೊದೆಯಲ್ಲಿ ಸಾರಂಗ ಕಂಡೆ, ಏಳುಹೆಡೆ ಸರ್ಪ ಎದುರಿಗೆ ಬಂದಿತ್ತು ನಾನ್ಹೋಗಲಿಲ್ಲ ತವರಿಂಗೆ " ಎನ್ನುತ್ತಾಳೆ. ಅತ್ತೆಯ ಪ್ರಶ್ನೆಯೂ ಅದೇ '' ಹೋಗುತ ! ಹುಲಿಕಂಡೆ ಬರುತ ಸಿಂಹವ ಕಂಡೆ ತವರ ದಾರಿಯಲಿ ಕಾಳಿಂಗ ಕಂಡು ಹಿಂತಿರುಗಿ ಬಂದೆ ಅತ್ತೆವ್ವ '' ಎಂದು ಕತೆ ಕಟ್ಟಿ ಹೇಳುತ್ತಾಳೆ. ತನ್ನ ಸಂಕಟವನ್ನು ಮರೆಮಾಚುತ್ತಾಳೆ.

ಆದರೆ ಇತ್ತ ''ತಂಗಿ ಹೋದ ಮರುದಿನ ಬಂದೀತು ಚಳಿಜ್ವರ ಮನೆಯ ಮಡದೀಗೆ ತಲೆಶೂಲೆ" ಇದಕ್ಕೆ ಕಾರಣ ಕೇಳಲು ದೇವಾಲಯಕ್ಕೆ ಅಣ್ಣ ಹೋಗುತ್ತಾನೆ. ಅರ್ಚಕರಿಗೆ ದರ್ಶನವುಂಟಾಗುತ್ತದೆ. ಮನೆಯ ಹೆಣ್ಮಗಳು ನೊಂದು ಹೋದ ಕಾರಣ ಮನೆದೇವರು ಮುನಿದು ಹೀಗೆಲ್ಲಾ ಮಾಡಿದ್ದಾನೆಂದು ತಿಳಿದು, ಅಣ್ಣ "ತಂಗಿಯ ಕರೆಯಲಿಕ್ಕೆ ಹೊರಟಾನು'

ಮದುವೇ ನನ ತಂಗಿ ಕನ್ನಡಿ ಕಳಸ
ನೀನು ಬರಬೇಕು ಮದುವೆಗೆ ತಂಗೆವ್ವ
ನೀ ಬರದೆ ನಾನು ಹೋಗಲಾರೆ

ಎಂದು ಹಟ ಹಿಡಿಯುತ್ತಾನೆ. ''ಅಪ್ಪ ಕಟ್ಟಿದ ಮನೆ, ಅಮ್ಮ ಮಾಡಿದ ಬದುಕು ಬರಬೇಕು ತಂಗಿ ತವರೀಗೆ — ನೀ ಬರದೆ ನಾನು ಹೋಗಲಾರೆ." ಎನ್ನುತ್ತಾನೆ.

ಒಪ್ಪದಿ ಕರೆಯುವ ಅಪ್ಪನಿಲ್ಲದ ಮೇಲೆ
ಆನೆಂತು ಬರಲಿ ತವರಿಂಗೆ ಎನ್ನಣ್ಣ
ಮತ್ಹೇಂಗೆ ಬರಲಿ ಮದುವೇಗೆ ? ॥
ಪ್ರೀತೀಲಿ ಕರೆಯುವ ಅಬ್ಬೆ ಇಲ್ಲದ ಮೇಲೆ
ಹೇಂಗೆ ಬರಲಣ್ಣ ತವರೀಗೆ ?............ !

ಮಾನವ ಜೀವಿತ

— ಕೆ. ಗುರುಲಿಂಗಶಾಸ್ತ್ರಿ

ಮಾನವ ಜೀವಿತವೆಂಬುದು ನೀರಿನಲ್ಲಿ ಎಣ್ಣೆ ಸೇರಿದರೆ ಯಾವ ರೀತಿ ಮಿಶ್ರವಾಗದೆ-ಯಿರುತ್ತದೆಯೋ ಅದರಂತೆ ಯಾವಾಗಲೂ ಸಮಾಜದೊಡನೆ ಬೆರೆತಿದ್ದರೂ ಮಾನವತ್ವವನ್ನು ಮಾತ್ರ ಮರೆಯದಿರಬೇಕು. ಇಂದು ಸಮಾಜದಲ್ಲಿ ನಾನು ತಾನೆಂಬ ಭೇದವು ಪರಿಪೂರ್ಣವಾಗಿ ತುಂಬಿದೆ. ತಾನೇ ಸಮಾಜದಲ್ಲಿ ದೊಡ್ಡವನೆಂದು ಹೆಸರು ಪಡೆಯಲು ಸಹನೆಯಿಂದ ಗೌರವವನ್ನು ಸಂಪಾದಿಸಬೇಕೆಂಬ ಆಶಾಭಾವವು ಮಾನವಲ್ಲಿ ಪರಿಪೂರ್ಣವಾಗಿ ತುಂಬಿ, ಮಾನವತ್ವವನ್ನೇ ಮರೆತು ಪ್ರೇಮವನ್ನು ಅಲ್ಲಗಳೆಯುವ ಸ್ಥಿತಿ ಬಂದಿದೆ. ಈ ರೀತಿಯಾದ ಸ್ಥಿತಿಯು ಸಮಾಜದಲ್ಲಿ ತುಂಬಿರುವುದರಿಂದಲೂ ಜಾತಿ, ಮತ ಭೇದಗಳ ವರ್ಣ ಸಂಕರವು ಸಮಾಜದಲ್ಲಿ ತುಂಬಿರುವುದರಿಂದಲೂ ಮಾನವತ್ವ ಮಾಯವಾಗುತ್ತದೆ. ಪ್ರತಿಯೊಬ್ಬ ಮಾನವನಲ್ಲಿರುವ ರಕ್ತ ಮಾಂಸಗಳು ಒಂದೇ. ಜೀವಾತ್ಮನು ಒಬ್ಬನೇ ಇವುಗಳಿಗೆ ದೊಡ್ಡದು ಚಿಕ್ಕದೆಂಬ ಜಾತಿ, ಮತ ಭೇದಗಳಿಲ್ಲ. ತಾಯಿಯ ಒಡಲಿನಲ್ಲಿ ನವಮಾಸಗಳು ಕಳೆದು ಈಶ್ವರ ಸಂಕಲ್ಪದಂತೆ ಭೂ ಮಾತೆಯ ಮಡಿಲಿಗೆ ಬರುವ ಜೀವ ಯಾವ ಜಾತಿ, ಯಾವ ಮತ? ಪರಮೇಶ್ವರನು ಮೊದಲೇ ಈ ವರ್ಣ ಸಂಕರವನ್ನು ನಿರ್ಣಯ ಮಾಡಿ ಕಳುಹಿಸಲಾರ. ಶ್ರೀ ಮದ್ಗುರು ಈ ರೀತಿ ಅಪ್ಪಣೆ ಕೊಟ್ಟಿರುತ್ತಾರೆ. ಮುನ್ನೂರು ಮುವತ್ತು ಕೋಟಿ ಜೀವರಾಶಿಗಳಲ್ಲಿ ಶ್ರೇಷ್ಠವಾಗಿರುವುದು ಮಾನವ ಜನ್ಮ. ಇದಕ್ಕೆ ಪಾಪ ಪುಣ್ಯಗಳ ತಾರತಮ್ಯ ಉಂಟು. ತಾನಾರೆಂಬುದನ್ನು ಸಾಧನ ರೂಪದಿಂದ ತಿಳಿಯುವ ಶಕ್ತಿಯು ಉಂಟು. ಅಂಡ ಪಿಂಡ ಬ್ರಹ್ಮಾಂಡಗಳೆಲ್ಲಾ ಪರಬ್ರಹ್ಮ ಸ್ವರೂಪವೇ. ಅಂಥಪ್ಪ ಪರಬ್ರಹ್ಮನ ಅನುಗ್ರಹವೇ ಸಾಗರ, ಬುದ್ಧಿಯೇ ಸೂರ್ಯನ ಕಿರಣ ಸತ್ಯವೇ ಮೇಘ, ಈ ಸತ್ಯವೆಂಬ ಮೇಘದ ಮೇಲೆ ಬುದ್ಧಿ ಏಕಾಗ್ರತೆಯೆಂಬ ತಣ್ಣನೆ ಗಾಳಿ ಬೀಸುವಾಗ ಪ್ರೇಮವೆಂಬ ಮಳೆ ಸುರಿಯುವುದು. ಇದರ ಹನಿಗಳು ಒಂದಕ್ಕೊಂದು ಸೇರಿ ಆನಂದವೆಂಬ ಪ್ರವಾಹವು ಹರಿಯುವುದು. ಈ ಪ್ರವಾಹವು ಅನುಗ್ರಹವೆಂಬ ಸಾಗರದಲ್ಲಿ ಐಕ್ಯವಾಗುವುದು. ಮಾನವನ ಏಕಾಗ್ರ ಚಿತ್ತವು ಒಂದೆಡೆಯಲ್ಲಿ ನಿಲ್ಲದಿದ್ದರೆ ಪ್ರೇಮವೆಂಬ ಬಿಂದುಗಳು ಒಟ್ಟುಗೂಡುವುದಿಲ್ಲ. ಆಗ ಪರಬ್ರಹ್ಮನಲ್ಲಿ ನಮ್ಮ ಮನೋಭಾವದ ಪ್ರೇಮ ರಸವಿಲ್ಲದಿರುವ ಕಾರಣ ಪರಮೇಶ್ವರನ ಸಾನಿಧ್ಯವನ್ನು ಸೇರಲಾಗುವುದಿಲ್ಲವೆಂದು ಶ್ರೀ ಗುರುಗಳು ಅಪ್ಪಣೆ ಕೊಟ್ಟಿರುತ್ತಾರೆ. —

[19 ನೇ ಪುಟದಿಂದ]

ಎಂದು ಕೇಳುತ್ತಾಳೆ ತಂಗಿ. ಅವರ ಮನೆದೇವರು ಮುನಿದಿದ್ದಾನೆ. ನೊಂದ ತಂಗಿಯ ಮನಸ್ಸು ಸಮಾಧಾನಗೊಳ್ಳದೆ ಪರಿಸ್ಥಿತಿಯ ವಿಕೋಪ ಪ್ರಶಾಂತವಾಗದು. ಕೊನೆಗೆ ಅಣ್ಣನ ಒತ್ತಾಯಕ್ಕೆ ಕಟ್ಟು ಬಿದ್ದು ಒಪ್ಪಂದಕ್ಕೆ ಬರುತ್ತಾಳೆ – ಕಮಲೆ.

ಬಂದರೆ ಬಂದೇನು ಹೊಸ್ತಿಲ ದಾಟಲಾರೆ
ಅಂಗಳದಿ ನಾನು ನಿಂದೇನು ಅಣ್ಣಯ್ಯ
ತಮ್ಮನಿಗೆ ಧಾರೆ ಎರೆದೇನು.

— ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇಳಿ ಬರುವ ಈ ಜಾನಪದ ಪ್ರಸಂಗದಲ್ಲಿ ಅಣ್ಣನಿಗೆ ತಂಗಿಯ ಮೇಲಿರುವ ಮಮಕಾರ, 'ಅಣ್ಣ ನಮ್ಮವ-ನಪ್ಪ ಅತ್ತಿಗೆ ನಮ್ಮವಳಲ್ಲ' ಎಂಬ ಮಾತಿಗೆ ಅತ್ತಿಗೆಯ ಗಯ್ಯಾಳಿತನದ ಆಧಾರ, ತಾಯಿಲ್ಲದ ತವರಿನ ವರ್ಣನೆ ಇವುಗಳು ರಸವತ್ತಾಗಿ, ಸುರಮ್ಯವಾಗಿ ಬಂದಿವೆ. —

ಕಾಯಕದಿಂದ → ಕೈಲಾಸದತ್ತ

— ಎಂ. ಎಸ್. ರೆಡ್ಡಿ.

ಎಂಟು ನೂರು ವರ್ಷಗಳ ಹಿಂದೆ ಸಮಾಜ ನಿಂತ ನೀರಿನಂತೆ, ಕೊಳಚೆ ಬಾವಿಯಂತೆ ನಾರುತ್ತಿತ್ತು. ಧಾರ್ಮಿಕ ನೈತಿಕ ಮಟ್ಟ ಕುಸಿದು ಪ್ರಳಯದ ಕಸ ತುಂಬಿ ಹೋಗಿತ್ತು. ಜಾತಿ ಮತ ಮೂಢ ನಂಬಿಕೆಗಳ ಹೊಲಸುರಾಡಿಯಲ್ಲಿ ಸಮಾಜ ಬಿದ್ದು ಹೊರಳಾಡುತ್ತಿತ್ತು. ಜೀವವಿದ್ದು ಜನ ಸತ್ತು, ವಿಷದ ಹಾವು ತನ್ನ ನಂಜು ನಾಲಿಗೆ ಚಾಚಿ ಮಾನವೀಯತೆಯನ್ನು ನುಂಗಿ ಹಾಕಿತ್ತು

ಆಗ;

ಶ್ರೀ ಸಾಮಾನ್ಯರಲ್ಲಿ ಒಬ್ಬೊಬ್ಬರಾಗಿ ಶರಣರು ಬೆಳಕಿನಕಿರಣವಾಗಿ; ಸಮಾಜಕ್ಕಂಟಿದ 'ಕ್ಯಾನ್ಸರ್' ಅನ್ನು ನಿವಾರಿಸುವ ಕ್ಷ ಕಿರಣವನ್ನು ಬೀರಿದರು. ಹೊಸ ಸಮಾಜ ನಿರ್ಮಿತವಾಗಿ ಚೇತನ ಪಡೆಯಿತು. ಈಗ ಜನ ಮನದ ಪ್ರೀತಿ ಗೌರವಗಳಿಸಿ ಬದುಕಿನತ್ತ ಬೆರಳು ಮಾಡಿ ತೋರಿಸುವ ದಾರಿದೀಪವಾಗಿದೆ. ಮನದ ಮೈಲಿಗೆ ಕಳೆದು ಜ್ಯೋತಿರ್ಲಿಂಗವಾಗಿದೆ **"ಕಾಯಕ"**

ಕಾಯಕದಿಂದ ಮುಂದಿನ ಹೆಜ್ಜೆಯೇ ಕೈಲಾಸ. ಸಮಾಜಕ್ಕಂಟಿದ ಸಕಲ ರೋಗಗಳನ್ನು ಪರಿಹರಿಸಲು ಕಾಯಕ ತಕ್ಕ ಮದ್ದು.

'ಕಾಯಕ' ಕಾಯ ಬಳಸಿ ಶ್ರಮದಿಂದ ಮನದ ಮೈಲಿಗೆ ಕಳೆದು ಕಾಯ, ವಾಚ, ಮನಸಾದುಡಿಯುವುದು. ತ್ರಿಕರಣ ಶುದ್ಧಿಯು ಕಾಯಕದಿಂದ ಸಂಪಾದಿಸಿ ಸಕಲ ಜೀವಾತ್ಮರ ಲೇಸಿಗೆ ಬಳಸುವುದರಲ್ಲಿ ಅಡಗಿದೆ. ಕಾಯಕ ತತ್ವದಿಂದ ಸಮಾಜದಲ್ಲಿ ಸುಖ ಶಾಂತಿ ತರಲು ಅಣ್ಣ ಪ್ರಯತ್ನಿಸಿದ. ಎಲ್ಲವೂ ಕಾಯಕದಿಂದಲೇ ಆಗಬೇಕು. ಕಾಯಕದಲ್ಲಿ ಭೇದ ಭಾವವಿಲ್ಲ. ಅನ್ಯಾಯವಾಗಿ ಗಳಿಕೆ ಮಾಡುವ ಹವಣಿಕೆಯಿಲ್ಲ. ಕಾರೆಯ ಸೊಪ್ಪಾದರೂ ಕಾಯಕದಿಂದಲೇ ಪಡೆದು ಉಣಬೇಕು. ಕಾಯಕ ಶರಣರು ನಡೆದು-ನುಡಿದು ತೋರಿದ ಹೊಸ ದಾರಿ. ಕಾಯಕದ ಅರ್ಥ ಬಹು ವಿಶಾಲ.

'ಕಾಯಕದಲ್ಲಿ ಮೇಲು ಕೀಳು ಸಲ್ಲದು.'
'ಕಾಯಕದಲ್ಲಿ ಆಸೆಯಿಲ್ಲ; ಸಮಾಜಕ್ಕೂ ಪಾಲುಂಟು'
'ಕಾಯಕದ ಮುಂದೆ ಗುರು, ಲಿಂಗ, ಜಂಗಮ ಶ್ರೇಷ್ಠವಲ್ಲ'
'ಕಾಯಕ ಹೊಟ್ಟೆ ಹೊರೆಯುವ ಸಾಧನವಷ್ಟೇ ಅಲ್ಲ; ಅದು ಆತ್ಮೋನ್ನತಿಯ ಸಾಧನ'
'ಕಾಯಕ ಕಾಯಾ, ವಾಚಾ, ಮನಸಾ ದುಡಿಮೆ.'
ಕಾಯಕವೇ ಕೈಲಾಸ.

ಎಲ್ಲ ಉದ್ಯೋಗಗಳು ಪವಿತ್ರವಾದವು ಸರ್ವರೂ ದುಡಿದು ತಿನ್ನಬೇಕು ಎಂಬುದನ್ನು ಶರಣರು ಬೋಧಿಸಿದರು. ತನು, ಮನ, ಧನ ಎಲ್ಲವನ್ನೂ ಗುರು ಲಿಂಗ ಜಂಗಮಕ್ಕೆ ಅರ್ಪಿಸಿ ಮಿಕ್ಕ ಪ್ರಸಾದ ಸ್ವೀಕರಿಸಿ ಆನಂದ ಪಡುತ್ತಾನೆ ಶರಣ. ಅಹಂಕಾರ ಅವನ ಹತ್ತಿರ ಸುಳಿಯುವುದಿಲ್ಲ. ಬಸವಣ್ಣನವರ ಈ ವಚನ ನೋಡಿ.

"ಜನ್ಮ ಜನ್ಮಕ್ಕೆ ಹೋಗಲೀಯದೆ
'ಸೋಽಹಂ' ಎಂದೆನಿಸದೆ 'ದಾಸೋಽಹಂ'

ಎಂದೆನಿಸಯ್ಯ
ಗುರುಲಿಂಗ ಜಂಗಮ ಪ್ರಸಾದವ ಕೋರಿ
ಬದುಕಿಸಯ್ಯ ಕೂಡಲ ಸಂಗಮ ದೇವ"

ಗುರು ಲಿಂಗಜಂಗಮ ಪ್ರಸಾದವ ಕೋರಿ ಬದುಕಿಸಬೇಕೆಂದು ಬೇಡುತ್ತಾನೆ. ಗುರುಲಿಂಗ ಜಂಗಮಕ್ಕೆ ಶ್ರೇಷ್ಠತೆ ತಂದುಕೊಟ್ಟ ಕಾಯಕ ಮಾಡಬೇಕೆಂದು ಬೋಧಿಸುತ್ತಾನೆ. ದುಡಿದು ಏನಾದರೊಂದು ಉದ್ಯೋಗ ಮಾಡಿ ಬದುಕಬೇಕು; ಜೀವನಕ್ಕಾಗಿಯೇ ಅಲ್ಲ ಗುರುಲಿಂಗ ಜಂಗಮ ದಾಸೋಹಕ್ಕಾಗಿ. ವ್ಯವಸಾಯ, ನೌಕರಿ, ಚಾಕರಿ ವ್ಯಾಪಾರ-ಉದ್ದಿಮೆ ಏನೇ ಮಾಡಲಿ ಶಿವನಿಗೆ ಅರ್ಪಿತ; ಸಮಾಜೋದ್ಧಾರ ಆರ್ಥಿಕಾಭಿವೃದ್ಧಿ, ಆತ್ಮೋನ್ನತಿ ಎಲ್ಲವೂ ಕಾಯಕದಿಂದಲೇ. ಎಂತಹ ಉದಾತ್ತ ವಿಚಾರ, ಉದಾತ್ತ ಕಲ್ಪನೆ! ಎಲ್ಲವನ್ನೂ ತನಗಾಗಿ ಆಶಿಸದೆ ಗುರುಲಿಂಗ ಜಂಗಮಕ್ಕೆ ಸಲ್ಲಿಸ ಬಯಸುತ್ತಾನೆ.

"ನಾನು ಆರಂಭವ ಮಾಡುವೆನಯ್ಯಾ
ಗುರು ಪೂಜೆಗೆಂದು!
ನಾನು ಬೆವಹಾರವ ಮಾಡುವೆನಯ್ಯಾ
ಲಿಂಗಾರ್ಚನೆಗೆಂದು!
ನಾನು ಪರಸೇವೆಯ ಮಾಡುವೆನಯ್ಯಾ!
ಜಂಗಮ ದಾಸೋಹಕೆಂದು!
ನಾನಾವ ಕರ್ಮಂಗಳ ಮಾಡಿದರೂ ಆ ಕರ್ಮ
ಫಲ ಭೋಗವ
ನೀ ಕೊಡುವೆ ಎಂಬುದು ನಾ ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು
ಕ್ರಿಯೆ ಮಾಡೆನು
ನಿಮ್ಮ ಸೊಮ್ಮಿಂಗೆ ಸಲ್ಲಿಸುವೆನು ನಿಮ್ಮಾಣೆ
ಕೂಡಲ ಸಂಗಮ ದೇವಾ||

ಕಾಯಕದಲ್ಲಿ ನಿರತನಾದರೆ ಗುರು ಲಿಂಗ ಜಂಗಮದ ಹಂಗು ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ ಕಾಯಕದೊಳಗಾಗಬೇಕು. ಯಾರಾದರೇನು?

ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದಲೇ ಶಿಲೆಯ
ಕುಲ ಹರಿವುದು
ಜಂಗಮವಾದರೂ ಕಾಯಕದಿಂದಲೇ ವೇಷದ
ಪಾಶ ಹರಿವುದು.
ಇದು ಚೆನ್ನಬಸವಣ್ಣ ಪ್ರಿಯ ಚಂದೇಶ್ವರ
ಲಿಂಗದ ಅರಿವು

ಎಲ್ಲರೂ ಕಾಯಕ ಮಾಡಿದರೆ ಬಡತನವೆಲ್ಲಿ? ಕಾಯಕ ಮಾಡುವ ಜೀವಿಗೆ ಬಡತನವಿಲ್ಲ. ಗಳಿಕೆಯ ಹವಣು ಕನಸು-ಮನಸಿನಲ್ಲಿ ಸುಳಿಯುವದಿಲ್ಲ. ಚಿತ್ತ ಶುದ್ಧರಾಗಿ ಕಾಯಕ ಮಾಡಿದರೆ ಎತ್ತ ನೋಡಿದತ್ತ ಲಕ್ಷ್ಮಿಯೇ!

"ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನ
ವಲ್ಲದೆ
ಚಿತ್ತಶುದ್ಧನಾಗಿ ಕಾಯಕ ಮಾಡವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ
ತಾನಾಗಿಪ್ಪಳು"

ಕಾಯಕದಿಂದ ದಾರಿದ್ರ್ಯ ದೂರ!

ಯಾವ ಜಾತಿ ಮತದ ಸಂಕೋಲೆ ಸನಿಹವಿಲ್ಲ. ಸರ್ವರೂ ಕಾಯಕದಿಂದಲೇ ಬದುಕಿ ಬಾಳಬೇಕು. ಆತ್ಮೋನ್ನತಿ ತಾನಾಗಿ ಆಗುತ್ತದೆ. ಮಾಡಿದವ ನಾನೆಂದು ಮನದಲ್ಲಿ ಹೊಳೆದರೆ ಎಡಿಸಿ ಕಾಡುತ್ತದೆ. ಶಿವನ ಡಂಗುರ! ಕಾಯಕದಲ್ಲಿ ಪ್ರೀತಿ ಶ್ರದ್ಧೆ ಮೂಡಿದರೆ ಆರ್ಥಿಕಾಭಿವೃದ್ಧಿ. 'ಉದ್ಯೋಗಂ ಪುರುಷ ಲಕ್ಷಣಂ' ಉದ್ಯೋಗವಿಲ್ಲದೆ (ಯಾವುದೇ ಉದ್ಯೋಗವಿರಲಿ ಕಾಯಕಕ್ಕೆ ಮೇಲು ಕೀಳೆಂಬ ಭಾವನೆ ಇಲ್ಲ) ಬಾಳುವ ಮನುಷ್ಯ ಮನುಷ್ಯನೇ? ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಎಂದೂ ಸಲ್ಲದು. ಅನ್ಯಾಯವಾಗಿ ಗಳಿಸಿದ ಹಣ ಸತ್ಪಾತ್ರಕ್ಕೆ ಸಲ್ಲಬಹುದೇ? ಎಂದಿಗೂ ಸಲ್ಲದು. ಕಾಯಕದ ದೃಷ್ಟಿಯಲ್ಲಿ ಯೋಗ್ಯವೂ ಅಲ್ಲ. ಅಂದಂದಿನ ಲಿಂಗ ನೈವೇದ್ಯಕ್ಕೆ ಅಂದಿನ ಕಾಯಕದ ಫಲ. ಇಂದಿಗೆ ನಾಳಿಂಗೆ ಎಂದೆನಾದರೆ ನಿಮ್ಮಾಣೆ; ನಿಮ್ಮ ಪ್ರಮಥರಾಣೆ. ಕಾಯಕದಿಂದ ಬಾಳುತ್ತ ನಡೆದರೆ ಆಲಸ್ಯದ ಬೇರು ಉಳಿಯಬಹುದೇ? ಅಂದಿನ ಫಲ ಅಂದೇ ಲೇಸೆನಿಸಿಕೊಂಡು ಬಾಳಬೇಕು. ಕಾಯಕದಿಂದ ಜೀವನ್ಮುಕ್ತಿ ಪಡೆಯಬೇಕು ಅಷ್ಟೆ!

ಕಾಯಕದಿಂದ ಗಳಿಸಿ ಸಮಾಜಕ್ಕೂ ಉಳಿಸಬೇಕು. ದುಡಿಯಬೇಕು ಮಡಿಯಬೇಕು. ಕಾಡಿಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಾರ್ಪಿತವಲ್ಲದೆ ದುರಾಸೆಯಿಂದ ಬಂದುದು ಅನರ್ಪಿತ. ಸತ್ಯ ಶುದ್ಧ ಮನಸ್ಸಿನಿಂದ ಸಮಾಜಹಿತ ದೇಶದ ಹಿತ ಬಯಸುವುದು, 'ಕಾಯಕ' "ಸಕಲ ಪ್ರಾಣಿಗಳಿಗೆ ಲೇಸಾಗಲೆಂದು ಮಜ್ಜನಕೆರೆವೆ" – ಇದು ಜ್ಞಾನ ನಿಧಿ ಚೆನ್ನ ಬಸವಣ್ಣನ ವಾಣಿ "ಶರಣರು ಕಾಯಕದಿಂದ ಕೈಲಾಸ ಲಭಿಸುವುದೆಂದು ಸಾರಿದ್ದಾರೆ. ತಪಸ್ಸಿಗಾಗಿ ಅಡವಿಗೆ ಹೋಗಬೇಕಾಗಿಲ್ಲ. ಕಾಯಕವೇ ಸರ್ವಸ್ವ ಕೂಡಲ ಸಂಗಮ ತನ್ನ ಕಾಯಕವನ್ನು ತಾನೇಮಾಡಿ ಲಿಂಗಾರ್ಪಿತ ಮಾಡಬೇಕೆಂದೂ, ಅನ್ಯರು ಮಾಡುವುದು ಸರಿಯಿಲ್ಲವೆಂದೂ ಹೇಳುತ್ತಾನೆ ಬಸವಣ್ಣ ಈ ವಚನದಲ್ಲಿ.

ತನ್ನಾಶ್ರಯದ ರತಿ ಸುಖವನು
ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವನು
ತಾ ಮಾಡಬೇಕಲ್ಲದೆ
ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ ? !
ಎಂದುದಾಗಿ
ಇದನರಿಯದೆ ಬರಿಯುಪಚಾರಕ್ಕೆ ಮಾಡುವ ವರೆಲ್ಲರೂ
ನಿಮ್ಮನೆತ್ತ ಬಲ್ಲರು, ಕೂಡಲ ಸಂಗಮ ದೇವಾ!

ತಾನೇ ಕಾಯಕ ಮಾಡಿ ಸಂಪಾದಿಸಿ ಶ್ರದ್ಧೆ ಭಕ್ತಿಯಿಂದ ಲಿಂಗಕ್ಕೆ ಅರ್ಪಿಸಬೇಕು. ಎನ್ನುವುದಕ್ಕೆ ಮೇಲಿನ ಅಣ್ಣನ ವಚನ 'ಕಾಯಕ'ಕ್ಕೆ ಹಿಡಿದ ದಿವ್ಯದರ್ಪಣ.

"ಕಾಯಕವೇ ಕೈಲಾಸ" ಈ ಮಂತ್ರ ಆಚಾರದ ಅಭಯವಾಣಿ. ಕಾಯಕ ಮೈಗೂಡಲು ಶಿವನ ಕರುಣೆ, ಅದೇ ವಿಜಯ. ಬಾಳಿನಲಿ ಬಂದು ಕೈಹಿಡಿದು ಮುಂದೆ ನಡೆಸುವ ಹೊಣೆ ಶಿವನದು. ಕಾಯಕದಿಂದಲೇ ಜೀವನ್ಮುಕ್ತಿ ! ಕಾಯಕದಿಂದಲೇ ಕೈಲಾಸ ! !

ಕಾಯಕವೇ ಕೈಲಾಸವಾದಾಗ ಎತ್ತ ನೋಡಿದತ್ತತ್ತ ಶಿವನೇ ! ಕಾಯಕದಿಂದ ನಡೆದರೆ 'ಭವ' ಎಲ್ಲಿ ?

—

ಭಕ್ತನ ಲಕ್ಷಣಗಳು

— ಹನುಮಂತಪ್ಪ

'ಭಕ್ತಿ' ಎಂಬ ಪದವು ಮೂಲತಃ ಭಜ ಎಂಬ ಧಾತುವಿನಿಂದ ರೂಪುಗೊಂಡು, ಉಪಾಸನೆ ಮಾಡು, ಪೂಜಿಸು, ಅರ್ಚಿಸು ಎಂಬ ಅರ್ಥವನ್ನು ಕೊಡುತ್ತದೆ,

ದೇವನಲ್ಲಿರುವ ಅನುರಕ್ತಿ, ಸಂಸಾರ, ಭವ, ದುಃಖ, ಮಮತೆ ಮೊದಲಾದವುಗಳಿಗೆ ನಿಗ್ರಹ ಕೊಡುವುದನ್ನು 'ಭಕ್ತಿ' ಎನ್ನಬಹುದು. "ಭಕ್ತಿ ಎಂಬುದು ಭವ ರೋಗಕ್ಕೆ ಕೊಡುವ ಔಷಧ, ಸಂಸಾರ ಸಾಗರದಿಂದ ದಾಟುವ ಸಾಧನೆ, ಬಂಧನವನ್ನು ಹರಿದೊಗೆದು ಮುಕ್ತಿಯನ್ನು ಸಾಧಿಸುವ ಮಾರ್ಗ, ಜೀವನು ದೇವನಲ್ಲಿ ಬೆರೆಯುವ ಸಾಧನ"–ಎಂದಿದ್ದಾರೆ ಬಸವಣ್ಣನವರು.
"ಪರಮ ಪ್ರೇಮಸ್ವರೂಪವೇ ಭಕ್ತಿ. ಯಾರು ತನ್ನ ಬಾಹ್ಯ ಮತ್ತು ಅಂತರಂಗವನ್ನು ಶುದ್ಧ ಮಾಡಿಕೊಂಡಿರುವನೋ ಅವನೇ ಭಕ್ತ. ನಿಜವಾದ ಭಕ್ತನು ದೇವರ ಹೆಸರನ್ನು ಕೇಳಿದೊಡನೆಯೇ ಭಾವೋನ್ಮತ್ತನಾಗುವನು"–ಎಂದಿದ್ದಾರೆ ಸ್ವಾಮಿ ವಿವೇಕಾನಂದರು.

ಭಕ್ತಿ ಮೊದಲಿಗೆ ಸ್ಪಷ್ಟಗೊಳ್ಳುವುದು ಒಬ್ಬ ದೇವನನ್ನು ನಂಬಬೇಕೆಂದು. 'ಹಾಲಲ್ಲಾದರೂ ಅದ್ದು ನೀರಲ್ಲಾದರೂ ಅದ್ದು ನನಗದೇ ಪ್ರಿಯ' ಎಂಬ ನಿಷ್ಠೆ ಭಕ್ತನ ಭಕ್ತಿಯ ನೆಲೆಮನೆ. ಈ ನಿಷ್ಠೆಯು ಭಕ್ತಿಯ ಆಚಾರ–ವಿಚಾರಗಳಲ್ಲಿ ಸಾಕ್ಷಾತ್ಕಾರಗೊಳ್ಳಬೇಕು. ಭಕ್ತಿಗೆ ಮತ್ತೊಂದು ಹೆಸರನ್ನು ಹೇಳುವುದುಂಟು: ಅದು 'ಬಸವನ ಭಕ್ತಿ.' ಆದರೆ ಇಂಥ ಭಕ್ತರು ದೊರೆಯುವುದು ತುಂಬಾ ದುರ್ಲಭ ಬಸವಣ್ಣನವರು ಭಕ್ತಿಯ ಸೂಕ್ಷ್ಮಾವಸ್ಥೆಯನ್ನು

"ಭಕ್ತಿಯೆಂಬುದ ಮಾಡಬಾರದು
ಕರಗಸದಂತೆ ಹೋಗುತ್ತಾ ಕೊಯ್ವುದು
ಬರುತ್ತಾ ಕೊಯ್ವುದು ಎಂದು ನಿರೂಪಿಸಿದ್ದಾರೆ. ಭಕ್ತಿಯ ನೆಲೆಗೆ ಸಿಕ್ಕ ಭಕ್ತ ಅದರಿಂದ ಮತ್ತೊಮ್ಮೆ ಬಿಡಿಸಿಕೊಳ್ಳಲಾಗದೆಂಬ ಅಂತರಾರ್ಥ ಅಲ್ಲುಂಟು. ಅಂತೆಯೇ ಅದರ ಆಚಾರ–ವಿಚಾರಗಳ ಕಷ್ಟವನ್ನು ಹೇಳುತ್ತದೆ. ಭಕ್ತಿಗೆ ಮಹತ್ವ ಬರುವುದು ಭಕ್ತನ ಅಂತರಂಗ ಬಹಿರಂಗ ಪರಿಶುದ್ಧತೆಯಿಂದ. ಅಲ್ಲವಾದರೆ:

"ಇಕ್ಕಳ ಕೈಮುಗಿದರೇನು ಗುರುಭಕ್ತನಾಗಬಲ್ಲುದೇ ಹೇಳಾ?" —ಇಕ್ಕಳ ಕೈಮುಗಿದಂತೆ, ಏತ ತಲೆವಾಗಿದಂತೆ— ಪರಿಣಾಮ ಆಡಂಬರದ ಭಕ್ತಿಯಾಗುತ್ತೆ.

ಮಾನವ ದೇವನಾಗುವ ವಿಶಿಷ್ಟಮಾರ್ಗ ಧಾರ್ಮಿಕ ಅರ್ಥದಲ್ಲಿ ಭಕ್ತಿಯ ರೂಪು ತೊಟ್ಟಿದೆ. ಜನ್ಮ ಜನ್ಮಾಂತರಗಳಲ್ಲಿ ಕೊಟಲೆ ಪರಂಪರೆಗೆ ತಿಲಾಂಜಲಿ ಕೊಡುವ ಭಕ್ತಿಮಾರ್ಗ–ಪರಮಾತ್ಮನ ಒಲುಮೆಯ ಸಾಕ್ಷಾತ್ಕಾರವಾಗುತ್ತದೆ. ಭವಗಳಲ್ಲಿ ಪರಿಣಮಿಸುವ ಆತ್ಮ ಇಲ್ಲಿಯ ಬಂಧನಗಳ ಕಟ್ಟನ್ನು ಹರಿದುಕೊಂಡು ಪರಮಾತ್ಮನಲ್ಲಿ ಲೀನವಾಗುತ್ತದೆ– ಮತ್ತೊಮ್ಮೆ ಇಲ್ಲಿಯ ವಾಸನೆಗೆ ಸಂಪೂರ್ಣ ತಿಲಾಂಜಲಿಯನಿತ್ತು. ಭಕ್ತನ ಸತ್ವವನ್ನು ಪರಿಕಿಸ ಹೊರಟ ಪರಮಾತ್ಮ, ಭಕ್ತನನ್ನು ಹಲವು ವಿಧಗಳಲ್ಲಿ ಪರೀಕ್ಷಿಸಿ ನೋಡುತ್ತಾನೆ: "ಹರ ತನ್ನ ಭಕ್ತರ ತಿರಿವಂತೆ ಮಾಡುವ' ಅರೆಯುವ, ಕೊರೆಯುವ, ಜರೆಯುವ ಕೊನೆಗೆ ತಿರಿವಂತೆ ಮಾಡುವ.

ಭಕ್ತಿಯ ತಾಯಿ ಬೇರು ನೀತಿ. ಹಾಗಲ್ಲವಾದರೆ ಅದು ಅತ್ತಿಯ ಹಣ್ಣಿನಂತೆ, ನಡೆ-ನುಡಿಗಳ ಸಾಮರಸ್ಯ ಭಕ್ತಿಯ ಪಥ ಇದು ವೀರಶೈವ ಭಕ್ತಿಯ ಸ್ಪಷ್ಟ ರೀತಿ–ನೀತಿ.

ವೀರಶೈವರು ಭಕ್ತಿಯನ್ನು ಆರು ವಿಧವಾಗಿ ವಿಂಗಡಿಸುತ್ತಾರೆ: 1) ಶ್ರದ್ಧಾ ಭಕ್ತಿ 2) ನಿಷ್ಠಾ

ಭಕ್ತಿ 3) ಅವಧಾನ ಭಕ್ತಿ 4) ಅನುಭಾವ ಭಕ್ತಿ 5) ಆನಂದ ಭಕ್ತಿ 6) ಸಮರಸ ಭಕ್ತಿ

ವೈದಿಕರು ಭಕ್ತಿಯನ್ನು ನವ ವಿಧವಾಗಿ ಹೇಳುತ್ತಾರೆ: 1) ಶ್ರವಣ ಭಕ್ತಿ 2) ಕೀರ್ತನ-ಭಕ್ತಿ 3) ಸ್ಮರಣಭಕ್ತಿ 4) ಸೇವಾನಾಭಕ್ತಿ 5) ಪೂಜಾ ಭಕ್ತಿ 6) ವಂದನಾ ಭಕ್ತಿ 7) ಸಖ್ಯ ಭಕ್ತಿ 8) ದಾಸ್ಯ ಭಕ್ತಿ 9) ಅರ್ಪಣ ಭಕ್ತಿ

ರಾಷ್ಟ್ರಕವಿ 'ಶ್ರೀ ಕುವೆಂಪು' ರವರು ಭಕ್ತನು ಈಶ್ವರನನ್ನು ಐದು ವಿಧವಾದ ಸಂಬಂಧಗಳಿಂದ ಆರಾಧಿಸಬಹುದು ಎನ್ನುತ್ತಾರೆ: 1] ಶಾಂತಭಾವ : ವೇದೋಪನಿಷತ್ತುಗಳ ಅಧ್ಯಯನದಿಂದ 2] ದಾಸ್ಯಭಾವ ಹನುಮಂತ-ರಾಮಚಂದ್ರನಲ್ಲಿಟ್ಟಂತೆ 3] ಸಖ್ಯಭಾವ: ಅರ್ಜುನ-ಶ್ರೀ ಕೃಷ್ಣನಂತೆ 4] ವಾತ್ಸಲ್ಯಭಾವ: ಶಿಶು-ತಾಯಿ 5] ಮಧುರಭಾವ: ಗೋಪಿ-ಕೃಷ್ಣರ ಸಂಬಂಧದಂತೆ.

ಮಾನವ ಸಹಜವಾದ ಒಳಗಿನ ದೌರ್ಬಲ್ಯಗಳನ್ನು ಗೊಡದೆ ಹತ್ತಿಕ್ಕಿ ಅಂತೆಯೇ ಹೊರಗಿನವರನ್ನು ದೂಷಿಸದೆ ನಡೆಯುವುದು ಭಕ್ತಿ. ಭಕ್ತಿಯ ಬಗ್ಗೆ ಇಷ್ಟು ತಿಳಿದನಂತರ ಭಕ್ತನ ಲಕ್ಷಣಗಳ ಬಗ್ಗೆ ತಿಳಿದುಕೊಳ್ಳೋಣ.

ಆಸೆ ಆಮಿಷಗಳಿಲ್ಲದವ, ಲೋಕದ ಸ್ತುತಿ-ನಿಂದನೆಗಳಿಗೆ ಗುರಿಯಾಗಿ ಶಾಂತನಾಗುವವ ಭಕ್ತ ಸಕಲ ಜೀವಾತ್ಮರಿಗೂ ಲೇಸ ಬಯಸುವ ಮನೋಧರ್ಮ ಭಕ್ತನದು. ಅವನು ಸತ್ಯಮೂರ್ತಿ-ಯಾಗಿರಬೇಕು. ಪದವಿಗಳಿಂದ ದೂರವಿರಬೇಕು.

ಭಕ್ತ ದಾನ ಮಾಡಬೇಕು, ಆದರೆ ಅ-ಪಾತ್ರದಾನ ಸಲ್ಲದು. ಭಕ್ತನು ಬಡವನಲ್ಲ. ಬಸವಣ್ಣ ಕೊಟ್ಟು ಕೊಟ್ಟು ಬಡವಾಗಲಿಲ್ಲ; ಬೇಡುವವರಿಲ್ಲದೇ ಬಡವಾದ. ಇದು ನಿಜವಾದ ಭಕ್ತನ ಭಕ್ತಿಯ ಲಕ್ಷಣ. ಹಿಡಿದ ಭಕ್ತಿಯನ್ನು ಬಿಡದೆ ಇದ್ದರೆ ಕೈ ಚಾಚಿ ಕರೆಯುತ್ತಾನೆ ಪರಮಾತ್ಮ. ಹಿಡಿದ ಭಕ್ತಿಯ ನಿಷ್ಠೆ ನಿಂತರೆ ಪರಮಾತ್ಮ ನಡು ನೀರಿನಲ್ಲಿ ಕೈ ಬಿಡುತ್ತಾನೆ.

ಆಡಂಬರದ ಭಕ್ತಿ ಭಕ್ತಿಯಲ್ಲ. ಹಾಗಾಗಿಯೇ ವಚನದಲ್ಲಿ "ಅರಸನ ಭಕ್ತಿ ಆಡಂಬರದಲ್ಲಿ ಹೋಯ್ತು ಎಂದು ಹೇಳಿದುದು. ಓಡುವಾತ ಲಿಂಕ ನಲ್ಲ, ಬೇಡುವಾತ ಭಕ್ತನಲ್ಲ. ಭಕ್ತನಾದವನು 'ಇಂದಿಗೆಂತು ನಾಳೆಗೆಂತು' ಎಂಬ ಚಿಂತೆಯನ್ನು ಬಿಡಬೇಕು. 'ಕಾಯಕವೇ ಕೈಲಾಸ' ಅವನದು. ಭಕ್ತ ಶಾಂತ ಸಮಾಧಾನಿಯಾಗಿರ ಬೇಕು. ಪರರ ನಿಂದೆ ಕೂಡದು. "ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಾಣವಕ್ಕೂ"- ಎಂಬ ಸರ್ವಜ್ಞನ ನುಡಿ ಭಕ್ತನದು. ಅವನು ಜಿತೇಂದ್ರಿಯತ್ವವನ್ನು ಹೊಂದಿರಬೇಕು.

ಬಹಿರ್ಮುಖ ವ್ಯಾಪಾರಗಳನ್ನು ಅಂತರ್ಮುಖಗೊಳಿಸುವ ಶಕ್ತಿಯೇ ಭಕ್ತನ ಅತ್ಯಗತ್ಯದ ಹೆಜ್ಜೆ-

---

ಕೊಲಂಬೋ ಸಮ್ಮೇಳನ

[8 ನೇ ಪುಟದಿಂದ]

ಸ್ಥಾಪನೆಗಾಗಿ ಒಗ್ಗೂಡುವುದೇ ನಮ್ಮ ಧ್ಯೇಯವಾಗಬೇಕು. ನಿಶ್ಶಸ್ತ್ರೀಕರಣ, ಸಹಕಾರ ಮತ್ತು ಸ್ವಾತಂತ್ರ್ಯ ಇವುಗಳ ಮೂಲಕ ವಿಶ್ವಶಾಂತಿ ಸ್ಥಾಪಿಸಲು ಇದು ಸದವಕಾಶ. ಅಲಿಪ್ತ ನೀತಿಯು ಸ್ವಾತಂತ್ರ್ಯ ಸಂಪಾದನೆಗೆ ಬೆಳಕನ್ನೂ, ಸಾಮರಸ್ಯಪೂರ್ಣ ಸಮಾಜ ರಚನೆಗೆ ಆದರ್ಶಗಳನ್ನೂ, ಮಾನವ ಜನಾಂಗದ ವಿಮೋಚನೆಗೆ ಹೊಸ ಭಾವನೆಗಳನ್ನೂ ರೂಪಿಸಿಕೊ-ಳ್ಳಲು ನೆರವಾಗಲಿ.

ಈ ಹಿಂದೆ ಮಾನವ ಜನಾಗಂದ ಐಕ್ಯತೆ ಮತ್ತು ಪ್ರಗತಿಯನ್ನು ಕುರಿತು ಪಂ|| ಜವಾಹರಲಾಲ್ ನೆಹರೂರವರು ನುಡಿದ ವಾಣಿ ಮನನೀಯವಾಗಿದೆ "ಬಾಗಿಲು ತೆರೆದಿದೆ. ವಿಧಿ ಎಲ್ಲರನ್ನೂ ಕೈಬೀಸಿ ಕರೆಯುತ್ತಿದೆ. ಸೋಲು-ಗೆಲವುಗಳ ಪ್ರಶ್ನೆ ಮುಖ್ಯವಲ್ಲ. ಒಡನಾಡಿಗಳಾದ ನಾವೆಲ್ಲ ಒಗ್ಗಟ್ಟನಿಂದ ಮುನ್ನಡೆಯೋಣ ಜಯಾಪಜಯಗಳು ಸರ್ವರಿಗೂ ಸಾಮಾನ್ಯವಾದುವೇ. ಆದರೂ ಭವಿಷ್ಯದಲ್ಲಿ ಜಯ ನಮ್ಮದೇ ಆಗಿದೆ.

ಹಾಗಾದರೆ ಮಾತ್ರ ಭಕ್ತನೆಂಬ ಲಕ್ಷಣಕ್ಕೆ ವೈಶಿಷ್ಟ ವುಂಟು – ಇಲ್ಲವಾದರೆ ಇಲ್ಲ' ಹಾಗಾಗಿ ಅಂಥಹ ವನು ಸದ್ಭಕ್ತ, ಅಂದಹಾಗೆ ವೀರಶೈವರಲ್ಲಿ, ಷಟ್ ಸ್ಥಲಗಳಲ್ಲಿ 'ಭಕ್ತಿ ಸ್ಥಲ'ಕ್ಕೆ ಅತಿ ಮಹತ್ವದ ಸ್ಥಾನವಿದೆ.

ಗುರುವಿನಲ್ಲಿ ತನು ವಂಚನೆ, ಲಿಂಗದಲ್ಲಿ ಮನವಂಚನೆ, ಜಂಗಮನಲ್ಲಿ ಧನವಂಚನೆ ಮಾಡು ವಾತನೆಂದಿಗೂ ಭಕ್ತನಾಗುವುದಿಲ್ಲ. ಜಂಗಮನಲ್ಲಿ ಜಾತಿಯನ್ನೂ, ಗುರುವಿನಲ್ಲಿ ಚಾಂತ್ರವನ್ನೂ, ಲಿಂಗ ದಲ್ಲಿ ಲಕ್ಷಣವನ್ನೂ ಅರಸುವವನು ಭಕ್ತನಲ್ಲ. ಅಶ ನಕ್ಕಾಗಿ ನಡೆಸುವ ಭಕ್ತಿ ಭಕ್ತಿಯಲ್ಲ. ಅವನು ಭಕ್ತನೆಂದೂ ಅಲ್ಲ. ಭಕ್ತನಾದನು ದಾಸಿ, ಪರಸ್ತ್ರೀ, ವೇಶ್ಯೆಯರ ಸಂಘದಿಂದ ದೂರ ಇರಬೇಕು. ಈ ತ್ರಿವಿಧ ದೋಷವನ್ನು ಕಳೆದುಕೊಂಡವನಿಗೆ ಭಕ್ತಿ ಅಳವಡುತ್ತದೆ.

ಭಕ್ತನಾದವನಿಗೆ ಪರಮಾತ್ಮನನ್ನು ನೆನೆ ಯಲು ತಿಥಿ, ವಾರ, ನಕ್ಷತ್ರಗಳ ಅವಶ್ಯಕತೆ ಇರು ವುದಿಲ್ಲ ಅವನಿಗೆ ಭಕ್ತಿ ನಿತ್ಯ ಜೀವನದಲ್ಲಿ ಸಹಜ ವಾಗಿರಬೇಕು. 'ನಾ ಮಾಡಿದನೆಂಬುದು' ಭಕ್ತನ ಲಕ್ಷಣವಲ್ಲ. ಭಕ್ತಿ ಉಪದೇಶದ್ದಲ್ಲ; ಅದು ಆಚರಣೆ ಯದು. ಕಂಡವರಿಗೆ ಕೈಮುಗಿವಾತನೇ ಭಕ್ತ.

"ಉರಿ ನಡೆವಂತೆ, ಭಾನು ನಡೆವಂತೆ, ಸಿಡಿಲ್ ನಡೆವಂತೆ ಭಕ್ತರ ನಡೆ"–ಎಂದು ಹರಿಹರ ಪಂಪಾ ಶತಕದಲ್ಲಿ ಹೇಳುತ್ತಾನೆ. "ಕೊಲುವೆ– ನೆಂಬ ಭಾಷೆ. ದೇವನಾದರೆ ಗೆಲುವೆನೆಂಬ ಭಾಷೆ ಭಕ್ತನದು." ನುಡಿದಂತೆ ನಡೆಯುವ ಭಾಷೆ. ಹಿಡಿದ ಛಲವನ್ನು ಬಿಡದ ಭಾಷೆ ಭಕ್ತನದು.

"ನೆರೆ ಕೆನ್ನೆಗೆ, ತೆರೆ ಗಲ್ಲಕ್ಕೆ, ಶರೀರ ಗೂಡು
ಹೋಗದ ಮುನ್ನ
ಹೊತ್ತಾರೆ ಎದ್ದು ಅಗ್ಗವಣಿ ಪತ್ರಿಯ ತಂದು
ಹೊತ್ತು ಹೋಗದ
ಮುನ್ನ" ಕೂಡಲ ಸಂಗನಮ್ಮ ಪೂಜಿಸುವ
ಕಾಯಕ ಭಕ್ತನದು

ಭಕ್ತ ಹೆದರಬಾರದು. ಕಾಲಗಂಜಿ ಭಕ್ತ ನಾಗಬಾರದು.

ಭಕ್ತಿಯಿಂದಲೇ ಮುಕ್ತಿ, ಭಕ್ತಿಯಿಂದಲೇ ಶಕ್ತಿ
ಭಕ್ತಿವಿರಕ್ತಿಯಳಿದರೀ ಜಗದಲ್ಲಿ
ಮುಕ್ತಿಯಿಲ್ಲೆಂದ ಸರ್ವಜ್ಞ."

— ಭಕ್ತಿಯಿಂದ ಮುಕ್ತಿಯೂ, ಶಕ್ತಿಯೂ, ಭಕ್ತಿ ವಿರಕ್ತಿಗಳು ಜಗತ್ತಿನಲ್ಲಿ ನಾಶವಾದರೆ ಮುಕ್ತಿ ಯೇ ಇಲ್ಲವೆಂದು ಸರ್ವಜ್ಞ ಹೇಳಿದ್ದಾನೆ.

ಹೀಗೆ ಭಕ್ತಿಯ ನಾನಾ ಗುಣಗಳನ್ನೊಳ ಗೊಂಡ ಕಿಂಕರನಾದ ಭಕ್ತ ಒಂದಲ್ಲ ಒಂದು ದಿನ ಶಂಕರನಾಗುವುದರಲ್ಲಿ ಸಂದೇಹವಿಲ್ಲ. —

ಮಾನ್ಯ ಓದುಗರಲ್ಲಿ ಮನವಿ.

ವಿಳಾಸಗಳು ಬದಲಾವಣೆಯಾದಲ್ಲಿ ಮತ್ತು ಇತರೆ ವಿಷಯಗಳಿಗೆ ನಮ್ಮೊಡನೆ ವ್ಯವಹರಿಸುವಾಗ ನಿಮ್ಮ ವಿಳಾಸಗಳ ಹಿಂಬದಿಯಲ್ಲಿರುವ ಕ್ರಮಾಂಕ ಸೂಚಿಸಿ ಸಹಕರಿಸಿ.

'SIDDAGANGA' Monthly, Sree Siddaganga Mutt. KRN Q-9.
Registered with the Registrar of News papers for India under No. 17139/69

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾ ಮಠ.